# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಶುಕ್ರವಾರ, ಜೂನ್ 4, 2021

ಸಂಪುಟ : 48 ಸಂಚಿಕೆ : 21 ☎ 254736 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com


## ಎಸ್ಸೆಸ್-ಎಸ್ಸೆಸ್ಸೆಂ ಸ್ವಂತ ಖರ್ಚಿನಿಂದ ನಗರದಲ್ಲಿ ಲಸಿಕೆ ವಿತರಣೆ ಇಂದಿನಿಂದ

ದಾವಣಗೆರೆ, ಜೂ.3- ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಅವರು ಕೊರೊನಾ ಸೋಂಕಿನಿಂದ ಪಾರು ಮಾಡುವ ಸಲುವಾಗಿ ತಮ್ಮ ಸ್ವಂತ ಹಣದಲ್ಲಿ ಕ್ಷೇತ್ರದ ಜನರಿಗೆ ಉಚಿತವಾಗಿ ಲಸಿಕೆ ನೀಡಲು ಮುಂದಾಗಿದ್ದು, ಉತ್ತರ ಕ್ಷೇತ್ರದ ಜನರಿಗೂ ಲಸಿಕೆ ನೀಡುವ ವಾಗ್ದಾನದಂತೆ ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಹೆಜ್ಜೆ ಇಟ್ಟಿದ್ದು, ಆ ಮುಖೇನ ಎಸ್ಸೆಸ್ ಮತ್ತು ಎಸ್ಸೆಸ್ಸೆಂ ಕೊಟ್ಟ ಮಾತನ್ನು ಉಳಿಸಿಕೊಳ್ಳುತ್ತಿದ್ದಾರೆ.

ನನ್ನ ಕ್ಷೇತ್ರದ ಜನರಿಗೆ ಸರ್ಕಾರ ವ್ಯಾಕ್ಸಿನ್ ನೀಡಬೇಕು. ಅದಕ್ಕೆ ತಗಲುವ ವೆಚ್ಚದ ಅರ್ಧ ಹಣವನ್ನು ಭರಿಸುವುದಾಗಿ ಎಸ್ಸೆಸ್ ಹೇಳಿದ್ದರು. ದಕ್ಷಿಣ ಅಷ್ಟೇ ಅಲ್ಲ ಉತ್ತರ ಕ್ಷೇತ್ರದ ಜನರಿಗೂ ಸ್ವಂತ ಹಣದಲ್ಲಿ ಲಸಿಕೆ ಹಾಕಿಸುವುದಾಗಿ ಎಸ್ಸೆಸ್ಸೆಂ ವಾಗ್ದಾನ ಮಾಡಿದ್ದರು.

ಅಂತೆಯೇ ಪ್ರಥಮಾದ್ಯತೆ ಮೇರೆಗೆ ಜೂನ್ 4 ರಿಂದ ದಕ್ಷಿಣ ಕ್ಷೇತ್ರದ ಜನರಿಗೆ ಉಚಿತವಾಗಿ ಲಸಿಕೆ ಹಾಕುವ ಮುಖೇನ ಲಸಿಕಾ ಶಿಬಿರಕ್ಕೆ ಚಾಲನೆ ಸಿಗಲಿದೆ. 2-3 ದಿನಗಳಲ್ಲಿ ಉತ್ತರ ಕ್ಷೇತ್ರದಲ್ಲಿ ಲಸಿಕೆ ಭಾಗ್ಯ ಸಿಗಲಿದೆ.

**ಪ್ರಾರಂಭಿಕವಾಗಿ 10 ಸಾವಿರ ಕೋವಿಶೀಲ್ಡ್ ಡೋಸ್ ಲಸಿಕೆ ಬಂದಿದ್ದು, ಇನ್ನೂ ವಾರ ಅಥವಾ 10 ದಿನಗಳ ಲ್ಲಿ 50 ಸಾವಿರ ಡೋಸ್ ಬರಲಿದೆ. ಈಗಾಗಲೇ 60 ಸಾವಿರ ಲಸಿಕೆಯ ನಾಲ್ಕು ಕೋಟಿ ವೆಚ್ಚವನ್ನು ಕಂಪೆನಿಗಳಿಗೆ ನೀಡಲಾಗಿದೆ. ಪಾಲಿಕೆ ಸದಸ್ಯರು ಇರಲಿ, ಬಿಡಲಿ ಕಾಂಗ್ರೆಸ್ ನಾಯಕರು, ಮುಖಂಡರು, ಕಾರ್ಯಕರ್ತರು ಒಗ್ಗೂಡಿ ಜನರಿಗೆ ಲಸಿಕೆ ಹಾಕಿಸಲು ಶ್ರಮಿಸುವರು. ಮೊದಲಿಗೆ 45 ವರ್ಷ ಮೇಲ್ಪಟ್ಟವರಿಗೆ ಲಸಿಕೆ ಕೊಡಲಾಗುವುದು. ನಂತರದಲ್ಲಿ 18 ವರ್ಷ ಮೇಲ್ಪಟ್ಟವರಿಗೂ ಲಸಿಕೆ ನೀಡುವ ಬಗ್ಗೆ ಯೋಚಿಸಲಾಗುವುದು.**

**- ಎಸ್.ಎಸ್. ಮಲ್ಲಿಕಾರ್ಜುನ್**

ಈ ಬಗ್ಗೆ ಇಂದು ಎಸ್ಸೆಸ್ ಮತ್ತು ಎಸ್ಸೆಸ್ಸೆಂ ತಮ್ಮ ನಿವಾಸದಲ್ಲಿ ಪತ್ರಿಕಾಗೋಷ್ಠಿ ನಡೆಸಿ ಮಾಹಿತಿ ನೀಡಿದರು. ಎಸ್ಸೆಸ್ ಮಾತನಾಡಿ, ನನ್ನ ಕ್ಷೇತ್ರದ ಜನರಿಗೆ ಲಸಿಕೆ ಹಾಕಲು (4ನೇ ಪುಟಕ್ಕೆ)



# ಜೂ.14ರವರೆಗೆ ಲಾಕ್‌ಡೌನ್

## ಶ್ರಮಿಕ ವರ್ಗಕ್ಕೆ 500 ಕೋಟಿ ರೂ. ಪ್ಯಾಕೇಜ್ ಘೋಷಿಸಿದ ಮುಖ್ಯಮಂತ್ರಿ

ಬೆಂಗಳೂರು, ಜೂ.3 - ಕೊರೊನಾ ಸೋಂಕಿನ ಸರಪಳಿ ಕಡಿತಕ್ಕೆ ಮತ್ತೆ ಜೂನ್ 14ರ ವರೆಗೂ ಲಾಕ್‌ಡೌನ್ ವಿಸ್ತರಿಸಿರುವ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಶ್ರಮಿಕ ವರ್ಗಕ್ಕೆ ಮತ್ತೆ 500 ಕೋಟಿ ರೂ. ಪ್ಯಾಕೇಜ್ ಘೋಷಣೆ ಮಾಡಿದ್ದಾರೆ.

ಹಿರಿಯ ಸಚಿವರು, ಅಧಿಕಾರಿಗಳು, ತಜ್ಞರ ಜತೆ ಸಮಾಲೋಚನೆ ನಡೆಸಿದ ನಂತರ ಸುದ್ದಿಗೋಷ್ಠಿಯಲ್ಲಿ ಈ ಘೋಷಣೆ ಮಾಡಿದ ಮುಖ್ಯಮಂತ್ರಿ ಅವರು, ಸೋಂಕು ಇಳಿಮುಖವಾಗುತ್ತಿದ್ದರೂ ವೈರಾಣು ಹರಡುವಿಕೆ ಸರಪಳಿ ಮುಂದುವರೆದಿದೆ ಎಂದರು.

ಶೇ.5 ಕ್ಕಿಂತ ಕಡಿಮೆ ಸೋಂಕು ಆಗುವವರೆಗೂ ಕಟ್ಟುನಿಟ್ಟಿನ ನಿರ್ಬಂಧಗಳನ್ನು ಮುಂದುವರೆಸಲು ತಜ್ಞರು, ಅಧಿಕಾರಿಗಳು ಸಲಹೆ ಮಾಡಿದ್ದಾರೆ. ಸಲಹೆ ಆಧಾರವಾಗಿಟ್ಟುಕೊಂಡು ಪ್ರಸ್ತುತ ಜೂ.7 ರವರೆಗೆ ಜಾರಿಯಲ್ಲಿರುವ ಕಠಿಣ ನಿರ್ಧಾರಗಳನ್ನು ಜೂ.14ರ ಮುಂಜಾನೆವರೆಗೂ ಮುಂದುವರೆಸಲಾಗಿದೆ.

ಹಾಲಿ ಕಠಿಣ ನಿಯಮಾವಳಿಗಳೇ ಮುಂದುವರೆಯಲಿವೆ. ಅದರಲ್ಲಿ ಯಾವುದೇ ವಿನಾಯಿತಿ ಇಲ್ಲವೆಂದು ಸ್ಪಷ್ಟಪಡಿಸಿದರು.

ಆ ಸಮಯದ ವೇಳೆಗೆ ಸೋಂಕು ಪ್ರಮಾಣ ಶೇ.5ಕ್ಕೆ ಇಳಿದಿದ್ದರೆ, ಕಠಿಣ ನಿಯಮಗಳನ್ನು ಹಿಂದಕ್ಕೆ ಪಡೆದು ಯಥಾಸ್ಥಿತಿ ಜನ ಜೀವನಕ್ಕೆ ಅವಕಾಶ ಮಾಡಿಕೊಡಲಾಗುವುದು. ಇದಕ್ಕೆ ಸಾರ್ವಜನಿಕರು ಸಹಕರಿಸಬೇಕು ಎಂದು ಅವರು ಮನವಿ ಮಾಡಿದರು.

ಅನುದಾನ ರಹಿತ ಶಾಲಾ ಶಿಕ್ಷಕರು, ಅಂಗನವಾಡಿ, ಆಶಾ ಕಾರ್ಯಕರ್ತೆಯರು, ಸಿನಿ ಕಲಾವಿದರು, ಮೀನುಗಾರರು, ಮುಜರಾಯಿ ಇಲಾಖೆಯಡಿ ಬರುವ ಸಿ ದರ್ಜೆ ದೇವಾಲಯದ ಅರ್ಚಕರು, ಅಡುಗೆ ಭಟ್ಟರು, ಮಸೀದಿಗಳ ಇಮಾಮರು, ನೇಕಾರರಿಗೆ ತಲಾ ಎರಡರಿಂದ ಐದು ಸಾವಿರ ರೂ.ವರೆಗೂ ಪರಿಹಾರ ಧನ ನೀಡಲಾಗುವುದು ಎಂದು ಯಡಿಯೂರಪ್ಪ ತಿಳಿಸಿದ್ದಾರೆ.

ಸರ್ಕಾರಿ ಮತ್ತು ಅನುದಾನಿತ ಶಾಲಾ ಮಕ್ಕಳಿಗೆ ಜೂನ್ ಮತ್ತು ಜುಲೈ ತಿಂಗಳಲ್ಲಿ ಆಹಾರ ಧಾನ್ಯದ ಜತೆಗೆ ಅರ್ಧ ಕೆ.ಜಿ. ಹಾಲಿನ ಪುಡಿ ನೀಡಲಾಗುವುದು ಎಂದು ಹೇಳಿದ್ದಾರೆ.

ವಕೀಲರ ಕಲ್ಯಾಣ ನಿಧಿಗೆ 5 ಕೋಟಿ ರೂ. ಪ್ಯಾಕೇಜ್ ಘೋಷಿಸಿರುವ ಮುಖ್ಯಮಂತ್ರಿಗಳು, ಕೆಲವು ಸಣ್ಣ ಕೈಗಾರಿಕೆಗಳಿಗೆ ಮಾರ್ಚ್ ಮತ್ತು ಮೇ ತಿಂಗಳ ವಿದ್ಯುತ್ ಬಿಲ್ ಮನ್ನಾ ಮಾಡಿದ್ದಾರೆ.

ಅಂಗನವಾಡಿ ಕಾರ್ಯಕರ್ತೆಯರಿಗೆ ತಲಾ ಎರಡು ಸಾವಿರ ರೂ., ಪ್ರಾಥಮಿಕ ಅನುದಾನ ರಹಿತ ಶಿಕ್ಷಕರಿಗೆ ತಲಾ 5000 ರೂ. ಉಳಿದೆಲ್ಲ ವರ್ಗದವರಿಗೂ ತಲಾ ಮೂರು ಸಾವಿರ ರೂ.ಪ್ಯಾಕೇಜ್ ಘೋಷಿಸಿರುವ ಮುಖ್ಯಮಂತ್ರಿ, ಇನ್ನೊಂದು ವಾರದಲ್ಲಿ ಅರ್ಹ ಫಲಾನುಭವಿಗಳ ಖಾತೆಗೆ ಹಣ ವರ್ಗಾಯಿಸಲಾಗುವುದು ಎಂದರು.

## ರಫ್ತು ಉದ್ಯಮಗಳಿಗೆ ವಿನಾಯಿತಿ

**ಕೃಷಿ, ಸಿದ್ಧ ಉಡುಪು, ಎಲೆಕ್ಟ್ರಾನಿಕ್ಸ್, ಆಟೋಮೊಬೈಲ್‌ಗಳು 50% ಕೆಲಸಗಾರರೊಂದಿಗೆ ಕಾರ್ಯ ನಿರ್ವಹಿಸಲು ಅನುಮತಿ**

ಬೆಂಗಳೂರು, ಜೂ.3 - ಕೊರೊನಾ ತಡೆಗಾಗಿ ಜಾರಿಗೆ ತರಲಾಗಿದ್ದ ಲಾಕ್‌ಡೌನ್‌ನಲ್ಲಿ ಕೆಲ ವಿನಾಯಿತಿ ನೀಡಿರುವ ರಾಜ್ಯ ಸರ್ಕಾರ, ರಫ್ತು ವಲಯದ ಉದ್ಯಮಗಳ ಪೂರ್ಣ ಕಾರ್ಯ ನಿರ್ವಹಣೆಗೆ ಅನುಮತಿ ನೀಡಿದೆ.

ರಾಜ್ಯದಲ್ಲಿ ರಫ್ತು ವಲಯಕ್ಕೆ ಸಂಬಂಧಿಸಿದ ಉದ್ಯಮಗಳಿಗೆ ಶೇ.100ರಷ್ಟು ಕಾರ್ಯ ನಿರ್ವಹಣೆಗೆ ರಾಜ್ಯ ಸರ್ಕಾರ ಅನುಮತಿ ನೀಡಿದ್ದು, ಶೇ.50 ರಷ್ಟು ಸಿಬ್ಬಂದಿಯೊಂದಿಗೆ ರಫ್ತು ಸಂಬಂಧಿತ ಕಂಪನಿಗಳು ಕಾರ್ಯನಿರ್ವಹಿಸಬಹುದಾಗಿದೆ.

ಒಂದು ಸಾವಿರಕ್ಕಿಂತ ಹೆಚ್ಚು ಕೆಲಸಗಾರರು ಅಥವಾ ಕಾರ್ಮಿಕರಿರುವ ಕೈಗಾರಿಕೆಗಳು ನಿಯಮಿತವಾಗಿ ವಾರಕ್ಕೆ ಎರಡು ಬಾರಿ ಆರ್‌ಟಿಪಿಸಿಆರ್ ಪರೀಕ್ಷೆ ನಡೆಸುವಂತೆ ಕೂಡಾ ರಾಜ್ಯ ಸರ್ಕಾರ ಆದೇಶ ನೀಡಿದೆ. ಸದ್ಯ ಈ ವಿನಾಯಿತಿ ಸೇರಿದಂತೆ ಈಗಿರುವ ಕಠಿಣ ನಿರ್ಬಂಧಗಳ ಮಾರ್ಗಸೂಚಿ ಇನ್ನೊಂದು ವಾರ ಬಹುತೇಕ ಯಥಾವತ್ತಾಗಿ ಮುಂದುವರೆಯಲಿದೆ.

ಕೃಷಿ ಉತ್ಪನ್ನಗಳು, ಟ್ರ್ಯಾಕ್ಟರ್ ಉತ್ಪಾದನೆ, ಸಿದ್ಧ ಉಡುಪುಗಳು, ಎಲೆಕ್ಟ್ರಾನಿಕ್ಸ್ ಉತ್ಪನ್ನಗಳು, ಆಟೋಮೊಬೈಲ್ ಉತ್ಪಾದಿಸುವ ಕೈಗಾರಿಕೆಗಳಿಗೆ ಅವಕಾಶವನ್ನು ನೀಡಲಾಗಿದೆ. ಶೇ. 50 ರಷ್ಟು ಕೆಲಸಗಾರರನ್ನಿಟ್ಟುಕೊಂಡು ಕೆಲಸ ಮಾಡಬೇಕು.

ಕೆಲಸದ ಅವಧಿಯಲ್ಲಿ ಕೋವಿಡ್ ಮಾರ್ಗ ಸೂಚಿ ಕಡ್ಡಾಯವಾಗಿ ಪಾಲಿಸಬೇಕು. ವಾರಕ್ಕೆ ಎರಡು ಬಾರಿ ಕೋವಿಡ್ ಪರೀಕ್ಷೆಗಳನ್ನು ನೌಕರರು, ಸಿಬ್ಬಂದಿಗೆ ಮಾಡಿಸಬೇಕು ಎಂದು ಷರತ್ತು ಹಾಕಲಾಗಿದೆ. ಅಂತೆಯೇ 1000ಕ್ಕೂ ಹೆಚ್ಚು ಕೆಲಸಗಾರರು ಅಥವಾ ಕಾರ್ಮಿಕರಿರುವ ಕೈಗಾರಿಕೆಗಳು ನಿಯಮಿತವಾಗಿ ವಾರಕ್ಕೆ ಎರಡು ಬಾರಿ ಆರ್‌ಟಿಪಿಸಿಆರ್ ಪರೀಕ್ಷೆ ನಡೆಸುವಂತೆ ಸರ್ಕಾರ ನಿರ್ದೇಶನ ನೀಡಿದೆ. (4ನೇ ಪುಟಕ್ಕೆ)

# ಖರೀದಿ ನೂಕು ನುಗ್ಗಲಿಗೆ ವರುಣನ ಬ್ರೇಕ್

## ಮುಂಜಾನೆ ಎರಡು ತಾಸು ಮಳೆ ನಂತರ ಮಾರುಕಟ್ಟೆಯಲ್ಲಿ ಹೆಚ್ಚಿದ ವಹಿವಾಟು









ದಾವಣಗೆರೆ, ಜೂ.3- ನಗರದಲ್ಲಿ ಗುರುವಾರ ಮುಂಜಾನೆ ಸುಮಾರು ಎರಡು ತಾಸು ಸುರಿದ ವರುಣ ಮಾರಾಟ ಹಾಗೂ ಖರೀದಿ ಭರಾಟೆಗೆ ತುಸು ಬ್ರೇಕ್ ಹಾಕಿದಂತಾಗಿತ್ತು.

ಜಿಲ್ಲೆಯಲ್ಲಿ ಪೂರ್ಣ ಲಾಕ್‌ಡೌನ್ ನಡುವೆ ಇಂದು ಬೆಳಿಗ್ಗೆ 6 ರಿಂದ ಮಧ್ಯಾಹ್ನ 12ರವರೆಗೆ ಅಗತ್ಯ ವಸ್ತುಗಳ ಖರೀದಿಗೆ ಅವಕಾಶ ನೀಡಲಾಗಿತ್ತು. ಆದರೆ ಬೆಳಿಗ್ಗೆ ಮಳೆ ಸುರಿದಿದ್ದರಿಂದ ವ್ಯಾಪಾರ ವಹಿವಾಟಿಗೆ ತುಸು ಅಡಚಣೆಯಾಯಿತಾದರೂ ನಂತರ ನಿಧಾನವಾಗಿ ಕೊಡು-ಕೊಳ್ಳುವಿಕೆ ಆರಂಭವಾಯಿತು.

ರಿಟೇಲ್ ಹಾಗೂ ಹೋಲ್‌ಸೇಲ್ ಖರೀದಿದಾದರರು ಬೆಳಿಗ್ಗೆಯೇ ಮಾರುಕಟ್ಟೆಗೆ ದಾಂಗುಡಿ ಇಟ್ಟಿದ್ದರು. ಕೆಲ ಕಿರಾಣಿ ಅಂಗಡಿ ಮಾಲೀಕರು ವಸ್ತುಗಳನ್ನು ಅನ್‌ಲೋಡ್ ಮಾಡಿಕೊಳ್ಳುತ್ತಲೇ ಮಾರಾಟವನ್ನೂ ಮಾಡುತ್ತಿದ್ದರು.

ಇತ್ತ ಜನರೂ ಸಹ ದಿನಸಿ ಅಂಗಡಿ ಹಾಗೂ ಅಡುಗೆ ಎಣ್ಣೆ ಅಂಗಡಿಗಳಿಗೆ ಮುಗಿ ಬಿದ್ದು ವಸ್ತುಗಳನ್ನು ಖರೀದಿಸಿದರು. ಕಳೆದ ಸೋಮವಾರ ನೂಕು ನುಗ್ಗಲಿನಿಂದಾಗಿ ಸಂಚಾರದಲ್ಲಿ ವ್ಯತ್ಯಯವಾಗಿದ್ದರಿಂದ ಈ ಬಾರಿ ಪೊಲೀಸರು ಬೆಳಿಗ್ಗೆಯೇ ಆಗಮಿಸಿ ವಾಹನ ಸಂಚಾರ ಸುಗಮವಾಗಿ ಸಾಗಲು ಕ್ರಮ ಕೈಗೊಂಡಿದ್ದರು. ಒಂದು ಬದಿ ಮಾತ್ರ ವಾಹನಗಳನ್ನು ಪಾರ್ಕ್ ಮಾಡಲು ಪೊಲೀಸರು ಅವಕಾಶ ಕಲ್ಪಿಸಿದ್ದರು. ಬೇಕಾ ಬಿಟ್ಟಿ ನಿಲ್ಲಿಸಿದ್ದ ವಾಹನಗಳ ಮಾಲೀಕರಿಗೆ ದಂಡದ ಬಿಸಿ ತೋರಿಸಿದರು. ಪರಿಣಾಮ ಅಷ್ಟಾಗಿ ಸಂಚಾರದಲ್ಲಿ ವ್ಯತ್ಯಯವಾಗಲಿಲ್ಲ.

ಆದರೆ ಮಾರುಕಟ್ಟೆಯಲ್ಲಿ ಕೊಳ್ಳುವವರ ವಾಹನಗಳು ಹಾಗೂ ವಸ್ತುಗಳನ್ನು ತಂದ ವಾಹನಗಳು ಏಕಕಾಲದಲ್ಲಿಯೇ ಹೆಚ್ಚಾಗಿದ್ದರಿಂದ ವಾಹನಗಳ ಸಂಖ್ಯೆ ಹೆಚ್ಚಾಗಿತ್ತು.

ಕೆಲವು ಅಂಗಡಿಗಳು ಬೆಳಿಗ್ಗೆ 6 ಗಂಟೆಗೂ ಮೊದಲೇ ತಮ್ಮ ಅಂಗಡಿ ಮುಂಗಟ್ಟುಗಳನ್ನು ತೆರೆದು ವ್ಯಾಪಾರ ವಹಿವಾಟು ನಡೆಸಿ, ಮಧ್ಯಾಹ್ನ 12 ಗಂಟೆ ಸಮೀಪಿಸುತ್ತಿದ್ದಂತೆ ಎಲ್ಲಾ ವ್ಯವಹಾರಗಳನ್ನು ಸ್ಥಗಿತಗೊಳಿಸಿದರು.

ಇಂದೂ ಸಹ ಅಡುಗೆ ಎಣ್ಣೆ, ಹೋಲ್‌ಸೇಲ್ ಕಾಂಡಿಮೆಂಟ್ಸ್ ಅಂಗಡಿಗಳ ಮುಂದೆ (3ನೇ ಪುಟಕ್ಕೆ)

## ಕೇಂದ್ರ ಸರ್ಕಾರದಿಂದ 30 ಕೋಟಿ ಬಯಾಲಜಿಕಲ್-ಇ ಲಸಿಕೆ ಖರೀದಿ

ನವದೆಹಲಿ, ಜೂ. 3 - ಹೈದರಾಬಾದ್‌ನ ಬಯಾಲಜಿಕಲ್ - ಇ ಲಸಿಕೆ ಉತ್ಪಾದನಾ ಕಂಪನಿಯ 30 ಕೋಟಿ ಲಸಿಕೆಗಳನ್ನು ಖರೀದಿ ಸಲು ಕೇಂದ್ರ ಸರ್ಕಾರ ಮುಂದಾಗಿದ್ದು, 1,500 ಕೋಟಿ ರೂ.ಗಳನ್ನು ಮುಂಗಡವಾಗಿ ಪಾವತಿಸಿದೆ.

ಬಯಾಲಜಿಕಲ್ - ಇ ಕಂಪನಿಯು ಆಗಸ್ಟ್ ನಿಂದ ಡಿಸೆಂಬರ್ ನಡುವೆ ಈ ಲಸಿಕೆಗಳನ್ನು ಉತ್ಪಾದಿಸಿ ಸಂಗ್ರಹಿಸಲಿದೆ. ಈ ಲಸಿಕೆಯು ಪ್ರಸಕ್ತ ಮೂರನೇ ಹಂತದ ಪ್ರಯೋಗದಲ್ಲಿದೆ. ಮೊದಲ ಎರಡು ಹಂತಗಳಲ್ಲಿ ಭರವಸೆದಾಯಕ ಫಲಿತಾಂಶ ದೊರೆತಿದೆ. ದೇಶೀಯ ಲಸಿಕೆ ಉತ್ಪಾದಕರು ಸಂಶೋಧನೆ ಹಾಗೂ ಅಭಿವೃದ್ಧಿ ಯಲ್ಲಿ ತೊಡಗುವಂತಾಗಲು ಬೆಂಬಲಿಸಲು ಹಾಗೂ ಹಣಕಾಸು ಬೆಂಬಲ ನೀಡಲು ಕೇಂದ್ರ ಸರ್ಕಾರ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ.

ಪ್ರಯೋಗ ಹಂತಕ್ಕೆ ಮೊದಲಿನಿಂದ ಹಿಡಿದು ಮೂರನೇ ಹಂತದ ಅಧ್ಯಯನದವರೆಗೆ ಕೇಂದ್ರ ಸರ್ಕಾರ ಬಯಾಲಜಿಕಲ್ - ಇ ಕೋವಿಡ್ ಲಸಿಕೆಗೆ ಬೆಂಬಲ ನೀಡುತ್ತಿದೆ. 100 ಕೋಟಿ ರೂ.ಗಳ ಹಣಕಾಸು ನೆರವಿನ ಜೊತೆಗೆ, ಅಗತ್ಯ ಎಲ್ಲಾ ಸಂಶೋಧನೆಗಳನ್ನು ಕೈಗೊಳ್ಳಲು ಸರ್ಕಾರ ನೆರವು ನೀಡಿದೆ. ಆತ್ಮನಿರ್ಭರ್ 3.0 ಪ್ಯಾಕೇಜ್ ಅನ್ವಯ ಲಸಿಕೆಯಲ್ಲಿ ಸ್ವಾವಲಂಬಿಯಾಗಲು ಸರ್ಕಾರ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ದೇಶದಲ್ಲಿ 5-6 ಕೊರೊನಾ ಲಸಿಕೆಗಳನ್ನು ಅಭಿವೃದ್ಧಿಪಡಿಸಲು ಕೇಂದ್ರ ಸರ್ಕಾರ 'ಮಿಷನ್ ಕೋವಿಡ್ ಸುರಕ್ಷ' ಯೋಜನೆಯಲ್ಲಿ ಉದ್ದೇಶಿಸಿದೆ.

ಇದರಿಂದ ಲಸಿಕಾ ಅಭಿಯಾನಕ್ಕೆ ವೇಗ ದೊರೆಯುವ ಜೊತೆಗೆ, ಸಂಪೂರ್ಣ ಲಸಿಕಾ ಉತ್ಪಾದನಾ ವ್ಯವಸ್ಥೆ ದೇಶದಲ್ಲಿ ರೂಪುಗೊಳ್ಳಲಿದೆ. ಇದು ಮುಂದಿನ ದಿನಗಳಲ್ಲಿ ಬೇರೆ ಲಸಿಕೆಗಳ ಸಂಶೋಧನೆ ಹಾಗೂ ಅಭಿವೃದ್ಧಿಗೂ ನೆರವಾಗಲಿದೆ.

## ಅಪರೂಪದ ಪ್ರತಿಭೆ ಬಿ.ಜಿ.ನಾಗರಾಜ್ ಇನ್ನಿಲ್ಲ



ದಾವಣಗೆರೆ, ಜೂ.3- ದಾವಣಗೆರೆ ಕಂಡ ಅಪರೂಪದ ಪ್ರತಿಭೆ ಪ್ರೊ. ಬಿ.ಜಿ.ನಾಗರಾಜ್ ಅವರು ಇಂದು ರಾತ್ರಿ 11.15ಕ್ಕೆ ಸ್ಥಳೀಯ ತರಳಬಾಳು ಬಡಾವಣೆಯಲ್ಲಿರುವ ತಮ್ಮ ಸ್ವಗೃಹದಲ್ಲಿ ವಯೋಸಹಜತೆಯಿಂದ ನಿಧನರಾದರು.

ಮೃತರಿಗೆ ಸುಮಾರು 83 ವರ್ಷ ವಯಸ್ಸಾಗಿತ್ತು. ಪತ್ನಿ, ಓರ್ವ ಪುತ್ರಿ, ಅಳಿಯ ಇಬ್ಬರು ಮೊಮ್ಮಕ್ಕಳು ಹಾಗೂ ಅಪಾರ ಬಂಧು - ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯನ್ನು ನಾಳೆ ದಿನಾಂಕ 4ರ ಶುಕ್ರವಾರ ಮಧ್ಯಾಹ್ನ 3 ಗಂಟೆಗೆ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು ಎಂದು ಅವರ ಪುತ್ರಿ, ಹಿರಿಯ ಪತ್ರಕರ್ತೆ, ಲೇಖಕಿ ಶ್ರೀಮತಿ ಪ್ರೀತಿ ನಾಗರಾಜ್ ತಿಳಿಸಿದ್ದಾರೆ.

**ಸಂಕ್ಷಿಪ್ತ ಪರಿಚಯ:** 'ಬಿಜಿಎನ್' ಎಂದೇ ಹೆಸರಾಗಿದ್ದ ಪ್ರೊ. ಬಿ.ಜಿ.ನಾಗರಾಜ್ ಅವರು ದಾವಣಗೆರೆ ತಾಲ್ಲೂಕಿನ ಬೂದಿಹಾಳ್ ಗ್ರಾಮದವರಾಗಿದ್ದು, ನಗರದ ಪ್ರತಿಷ್ಠಿತ ಬಾಪೂಜಿ ವಿದ್ಯಾ ಸಂಸ್ಥೆಯ ಧ.ರಾ.ಮ ವಿಜ್ಞಾನ ಕಾಲೇಜಿನಲ್ಲಿ ಸುಮಾರು 30 ವರ್ಷಗಳ ಕಾಲ ಗಣಿತ ವಿಷಯದ ಅಧ್ಯಾಪಕರಾಗಿ, ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದರು.

ಆಕರ್ಷಕ ವ್ಯಕ್ತಿತ್ವ ಹೊಂದಿದ್ದ ಹಾಗೂ ಪ್ರಬುದ್ಧ ಮಾತಿನ ಮೋಡಿಕಾರರಾಗಿದ್ದ ಬಿಜಿಎನ್ ಅವರ ಉಪನ್ಯಾಸ - ಭಾಷಣಗಳಲ್ಲಿ ನವಿರಾದ ಹಾಸ್ಯದ ಜೊತೆಗೆ ಹೂರಣದೊಂದಿಗೆ ಉತ್ತಮ ವಿಚಾರಗಳನ್ನು (5ನೇ ಪುಟಕ್ಕೆ)

## ರಾಜ್ಯದಲ್ಲಿ ಕೊರೊನಾ ಸೋಂಕು ಏರಿಕೆ

ಬೆಂಗಳೂರು, ಜೂ. 3 – ರಾಜ್ಯದಲ್ಲಿ ಗುರುವಾರ 18,324 ಕೊರೊನಾ ಪ್ರಕರಣಗಳು ವರದಿಯಾಗಿವೆ. ಇದೇ ದಿನ 24,036 ಜನ ಗುಣಮುಖರಾಗಿ ಬಿಡುಗಡೆಯಾಗಿದ್ದಾರೆ.

ರಾಜ್ಯದಲ್ಲಿ ಜೂನ್ 1ರಂದು 14,304 ಹಾಗೂ ಜೂನ್ 2ರಂದು 16,387 ಕೊರೊನಾ ಪ್ರಕರಣಗಳು ವರದಿಯಾಗಿದ್ದವು. ಕಳೆದ 3 ದಿನಗಳಿಂದ ಕೊರೊನಾ ಪ್ರಕರಣಗಳ ಸಂಖ್ಯೆ ಏರುಮುಖವಾಗಿದೆ. ಗುರುವಾರ 514 ಜನರು ಕೊರೊನಾದಿಂದ ಸಾವನ್ನಪ್ಪಿದ್ದು, ಒಟ್ಟು ಮೃತರ ಸಂಖ್ಯೆ 30,531ಕ್ಕೆ ಏರಿಕೆಯಾಗಿದೆ.

ಗುರುವಾರ ಒಂದೇ ದಿನ ರಾಜ್ಯದಲ್ಲಿ 1.50 ಲಕ್ಷ ಜನರನ್ನು (4ನೇ ಪುಟಕ್ಕೆ)


### ಶ್ರೀಮತಿ ಯಜಮಾನ್ ಬೆಳ್ಳೂಡಿ ಅಮೃತಮ್ಮ ನಿಧನ



ದಾವಣಗೆರೆ ನರಸರಾಜ ರಸ್ತೆ ವಾಸಿ (#234/1)

**ಶ್ರೀಮತಿ ಅಮೃತಮ್ಮ ಚಂದ್ರಶೇಖರಪ್ಪ ಬೆಳ್ಳೂಡಿ**

ಇವರು ದಿನಾಂಕ 3.06.2021ರ ಗುರುವಾರ ಬೆಳಗ್ಗೆ 6 ಗಂಟೆಗೆ ಸ್ವಗೃಹದಲ್ಲಿ ವಯೋ ಸಹಜ ಖಾಯಲೆಯಿಂದ ನಿಧನರಾದರು ಎಂದು ತಿಳಿಸಲು ವಿಷಾದಿಸುತ್ತೇವೆ. ಓರ್ವ ಪುತ್ರಿ, ನಾಲ್ವರು ಪುತ್ರರು, ಅಳಿಯ, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಮಿತ್ರರನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ಅದೇ ದಿನಾಂಕ ಮಧ್ಯಾಹ್ನ 12 ಗಂಟೆಗೆ ದಾವಣಗೆರೆ ಹಳೆಯ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು.

**ಇಂತಿ ದುಃಖತಪ್ತರು**

**ಬೆಳ್ಳೂಡಿ ಕುಟುಂಬ ವರ್ಗ**

**ಬೆಲ್‌ಸನ್ ಟೈರ್ಸ್ ಮತ್ತು ಸಿಬ್ಬಂದಿ ವರ್ಗ,** ಚನ್ನಗಿರಿ ರೋಡ್, ದಾವಣಗೆರೆ.

**ನ್ಯೂ ಬೆಲ್‌ಸನ್ ಟೈರ್ಸ್** ಪಿ.ಬಿ.ರಸ್ತೆ, ದಾವಣಗೆರೆ.


## ಜಿಲ್ಲೆಯಲ್ಲಿ 559 ಪಾಸಿಟಿವ್, 7 ಸಾವು

ದಾವಣಗೆರೆ, ಜೂ. 3 - ಜಿಲ್ಲೆಯಲ್ಲಿ ಗುರುವಾರ 559 ಜನರಲ್ಲಿ ಸೋಂಕು ಕಾಣಿಸಿಕೊಂಡಿದ್ದು, ಏಳು ಜನವರು ಮೃತಪಟ್ಟಿದ್ದಾರೆ. ಒಂದು ಸಾವಿರ ಜನರು ಗುಣಮುಖರಾಗಿದ್ದಾರೆ ಎಂದು ಜಿಲ್ಲಾಧಿಕಾರಿಗಳ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ದಾವಣಗೆರೆ ತಾಲ್ಲೂಕಿನಲ್ಲಿ 278, ಹರಿಹರ 78, ಜಗಳೂರು 15, ಚನ್ನಗಿರಿ 117, ಹೊನ್ನಾಳಿ 63 ಹಾಗೂ ಹೊರ ಜಿಲ್ಲೆಯ ಎಂಟು ಜನರಲ್ಲಿ ಸೋಂಕು ಕಾಣಿಸಿಕೊಂಡಿದೆ. ಹರಿಹರ ತಾಲ್ಲೂಕು ಹನಗವಾಡಿಯ 45 (3ನೇ ಪುಟಕ್ಕೆ)

## ಮಹಾರಾಷ್ಟ್ರದಲ್ಲಿ 10, 12ನೇ ತರಗತಿ ಪರೀಕ್ಷೆಗಳು ರದ್ದು

ಮುಂಬೈ, ಜೂ. 3 – ಕೊರೊನಾ ಹಿನ್ನೆಲೆಯಲ್ಲಿ ಮಹಾರಾಷ್ಟ್ರ ಸರ್ಕಾರ ತನ್ನ 10 ಹಾಗೂ 12ನೇ ತರಗತಿ ಪರೀಕ್ಷೆಗಳನ್ನು ರದ್ದುಗೊಳಿಸಿದೆ.

ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಸಚಿವ ವಿಜಯ್ ವಡೆಟ್ಟಿವಾರ್ ಈ ವಿಷಯ ತಿಳಿಸಿದ್ದಾರೆ. ಕೇಂದ್ರ ಸರ್ಕಾರ ಸಹ ಸಿಬಿಎಸ್‌ಇಯ 10 ಹಾಗೂ 12ನೇ ತರಗತಿ ಪರೀಕ್ಷೆಗಳನ್ನು ರದ್ದುಗೊಳಿಸಿದೆ.

## ಕನ್ನಡ ಕೊಳಕು ಭಾಷೆ ಎಂದ ಗೂಗಲ್ ಶೋಧ

**ಲೋಪಕ್ಕೆ ವಿಷಾದ ವ್ಯಕ್ತಪಡಿಸಿದ ಕಂಪನಿ**

ಬೆಂಗಳೂರು, ಜೂ. 3 – ಕನ್ನಡ ಭಾರತದ ಅತ್ಯಂತ ಕೊಳಕು ಭಾಷೆ ಎಂದು ಗೂಗಲ್ ಶೋಧದಲ್ಲಿ ತಿಳಿಸಿದ್ದು ವಿವಾದಕ್ಕೆ ಕಾರಣವಾಗಿದೆ. ಈ ಬಗ್ಗೆ ಕಾನೂನು ಕ್ರಮ ತೆಗೆದುಕೊಳ್ಳುವುದಾಗಿ ರಾಜ್ಯ ಸರ್ಕಾರ ತಿಳಿಸಿದೆ.

ಗೂಗಲ್‌ನಲ್ಲಿ ಭಾರತದ ಅತ್ಯಂತ ಕೊಳಕು ಭಾಷೆ ಯಾವುದು ಎಂದು ಶೋಧಿಸಿದಾಗ ಕನ್ನಡ ಎಂಬ ಉತ್ತರ ಸಿಗುತ್ತಿತ್ತು. ಈ ಬಗ್ಗೆ ಜನರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದರು. ಈ ಬಗ್ಗೆ ಕ್ಷಮೆ ಯಾಚಿಸಿರುವ ಗೂಗಲ್, ಗೂಗಲ್‌ನ ಶೋಧ ನನ್ನ ನಿಲುವನ್ನು ತಿಳಿಸುವುದಿಲ್ಲ ಎಂದು ಹೇಳಿದೆ.

ಈ ಬಗ್ಗೆ ಹೇಳಿಕೆ ನೀಡಿರುವ ಕನ್ನಡ ಮತ್ತು ಸಂಸ್ಕೃತಿ ಸಚಿವ ಅರವಿಂದ ಲಿಂಬಾವಳಿ, ಗೂಗಲ್‌ಗೆ ಕಾನೂನು ನೋಟಿಸ್ ಕಳಿಸಲಾಗಿದೆ ಎಂದಿದ್ದಾರೆ.

ನಂತರ ಟ್ವಿಟ್ಟರ್ ಮೂಲಕ ತನ್ನ ಹೇಳಿಕೆ ನೀಡಿರುವ ಲಿಂಬಾವಳಿ, ಕನ್ನಡ ಹಾಗೂ ಕನ್ನಡಿಗರಿಗೆ ಗೂಗಲ್ ಕ್ಷಮೆ ಯಾಚಿಸಬೇಕು ಎಂದು ಆಗ್ರಹಿಸಿದರು. ಕನ್ನಡಕ್ಕೆ 2,500 ವರ್ಷಗಳ ಇತಿಹಾಸವಿದೆ. ಕನ್ನಡ ಶತಮಾನಗಳಿಂದ ಕನ್ನಡಿಗರ ಹೆಮ್ಮೆಯಾಗಿದೆ ಎಂದವರು ತಿಳಿಸಿದ್ದಾರೆ.

ಈ ಬಗ್ಗೆ ಹೇಳಿಕೆ ನೀಡಿರುವ ಗೂಗಲ್ ವಕ್ತಾರರು, ಶೋಧ ಎಲ್ಲಾ ಕಾಲದಲ್ಲೂ ಪರಿಪೂರ್ಣವಾಗಿರುವುದಿಲ್ಲ. ಕೆಲವೊಮ್ಮೆ ನಿರ್ದಿಷ್ಟ ಶೋಧಕ್ಕೆ ಅಚ್ಚರಿ ತರುವ ರೀತಿಯ ಉತ್ತರಗಳು ಸಿಗುತ್ತವೆ ಎಂದಿದ್ದಾರೆ. (4ನೇ ಪುಟಕ್ಕೆ)

# ಅಜ್ಜಪ್ಪ ಪವಾರ್ ನಿಧನ



ಜನನ : 03-06-1951

ಮರಣ : 03-06-2021

ದಾವಣಗೆರೆ ಸಿಟಿ ಪಿ.ಬಿ. ರಸ್ತೆ ಪಿಸಾಳೆ ಕಾಂಪೌಂಡ್ ನರಹರಿಶೇಟ್ ಸಭಾ ಭವನದ ಹಿಂಭಾಗದ ವಾಸಿ,

## ಶ್ರೀ ಅಜ್ಜಪ್ಪ ಪವಾರ್ ಅವರು

ದಿನಾಂಕ 03.06.2021ರ ಗುರುವಾರ ಸಂಜೆ ಹೃದಯಾಘಾತದಿಂದ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 70 ವರ್ಷ ವಯಸ್ಸಾಗಿತ್ತು. ಮೃತರು ಪತ್ನಿ, ಮೂವರು ಪುತ್ರರು, ಇಬ್ಬರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು, ಮರಾಠ ಸಮಾಜದ ಬಂಧುಗಳು ಹಾಗೂ ಅಪಾರ ಮಿತ್ರರನ್ನು ಅಗಲಿದ್ದಾರೆ. ಅಜ್ಜಪ್ಪ ಪವಾರ್ ಅವರ ಪಾರ್ಥಿವ ಶರೀರದ ಅಂತ್ಯಕ್ರಿಯೆಯನ್ನು ದಿನಾಂಕ 04.06.2021ರ ಶುಕ್ರವಾರ ಬೆಳಿಗ್ಗೆ 10.30 ಕ್ಕೆ ನಗರದ ಹಿಂದೂ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**

**ಮೊ. : 98440-32296, 98442-82251, 90085-33469**

# ಕೋವಿಶೀಲ್ಡ್‌ಗೆ ಕಾನೂನು ಬಾಧ್ಯತೆ ವಿನಾಯಿತಿ ನೀಡಲು ಮನವಿ

ನವದೆಹಲಿ, ಜೂ. 3 – ತನ್ನ ಕೋವಿಶೀಲ್ಡ್ ಲಸಿಕೆಗೂ ಕಾನೂನು ಬಾಧ್ಯತೆಯಿಂದ ವಿನಾಯಿತಿ ನೀಡಬೇಕು ಎಂದು ಸೆರಮ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿದೆ ಎಂದು ಮೂಲಗಳು ತಿಳಿಸಿವೆ.

ವಿದೇಶಿ ಲಸಿಕಾ ಕಂಪನಿಗಳಾದ ಫೈಜರ್ ಹಾಗೂ ಮೊಡೆರ್ನಾಗಳು ತಮ್ಮ ಲಸಿಕೆಗೆ ಕಾನೂನು ಬಾಧ್ಯತೆಯಿಂದ ವಿನಾಯಿತಿ ನೀಡಬೇಕೆಂದು ಕೇಳಿದ್ದವು. ಅದರ ಬೆನ್ನಲ್ಲೇ ಈ ಬೆಳವಣಿಗೆಯಾಗಿದೆ.

ನಿಯಮಗಳು ಪ್ರತಿಯೊಬ್ಬರಿಗೂ ಸಮನಾಗಿರಬೇಕು ಎಂಬುದು ಎಸ್.ಐ.ಐ. ವಾದವಾಗಿದೆ.

ಕೊರೊನಾ ಸಾಂಕ್ರಾಮಿಕದ ಈ ಸಂದರ್ಭದಲ್ಲಿ ಲಸಿಕಾ ಉತ್ಪಾದಕರಿಗೆ ಎಲ್ಲಾ ಕಾನೂನು ಪ್ರಕರಣಗಳಿಂದ ರಕ್ಷಣೆ ಇರಬೇಕು ಎಂದು ಎಸ್.ಐ.ಐ. ಮುಖ್ಯಸ್ಥ ಅದರ್ ಪೂನಾವಾಲಾ ಈ ಹಿಂದೆ ಹೇಳಿದ್ದರು.

2020ರ ಡಿಸೆಂಬರ್‌ನಲ್ಲಿ ಸಮಾರಂಭವೊಂದರಲ್ಲಿ ಮಾತನಾಡುತ್ತಿದ್ದ ಅವರು, ಸರ್ಕಾರ ಲಸಿಕೆ ಉತ್ಪಾದಕರಿಗೆ ಎಲ್ಲಾ ಕಾನೂನು ಪ್ರಕರಣಗಳಿಂದ ವಿನಾಯಿತಿ ನೀಡಬೇಕು. ಇತರೆ ದೇಶಗಳಲ್ಲಿ ಈ ಕುರಿತ ಮಾತುಕತೆ ನಡೆಯುತ್ತಿದೆ ಎಂದು ಹೇಳಿದ್ದರು.

## ಸ್ಪುಟ್ನಿಕ್ ಲಸಿಕೆ ಉತ್ಪಾದನೆಗೆ ಎಸ್‌ಐಐ ಅರ್ಜಿ

ನವದೆಹಲಿ, ಜೂ. 3 - ಸ್ಪುಟ್ನಿಕ್ ವಿ ಲಸಿಕೆ ಉತ್ಪಾದಿಸಲು ಅನುಮತಿ ಕೇಳಿ ಔಷಧ ನಿಯಂತ್ರಕ ಡಿ.ಸಿ.ಜಿ.ಐ. ಬಳಿ ಸೆರಮ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ (ಎಸ್.ಐ.ಐ.) ಅರ್ಜಿ ದಾಖಲಿಸಿದೆ.

ಲಸಿಕೆ ಅಭಿವೃದ್ಧಿಪಡಿಸಿರುವ ರಷ್ಯಾದ ಗಮಾಲೆಯ ರೀಸರ್ಚ್ ಇನ್‌ಸ್ಟಿಟ್ಯೂಟ್ ಆಫ್ ಎಪಿಡೆಮಾಲಜಿ ಅಂಡ್ ಮೈಕ್ರೋಬಯಾಲಜಿ ಜೊತೆಗೆ ಎಸ್.ಐ.ಐ. ಕೈ ಜೋಡಿಸಿದೆ.

ಲಸಿಕೆ ಉತ್ಪಾದನೆಗಾಗಿ ಅಗತ್ಯ ಸಾಮಗ್ರಿಗಳನ್ನು ರಷ್ಯಾದಿಂದ ಆಮದು ಮಾಡಿಕೊಳ್ಳಲು ಮೇ 18ರಂದು ಎಸ್.ಐ.ಐ. ಅರ್ಜಿ ದಾಖಲಿಸಿತ್ತು. ಪ್ರಸಕ್ತ ಸ್ಪುಟ್ನಿಕ್ ವಿ ಲಸಿಕೆಯನ್ನು ಡಾ. ರೆಡ್ಡೀಸ್ ಲ್ಯಾಬೊರೇಟರೀಸ್ ಉತ್ಪಾದಿಸುತ್ತಿದೆ. ಎಸ್.ಐ.ಐ. ಈಗಾಗಲೇ ಕೋವಿಶೀಲ್ಡ್ ಲಸಿಕೆ ಉತ್ಪಾದಿಸುತ್ತಿದೆ. ಜೂನ್ ತಿಂಗಳಲ್ಲಿ 10 ಕೋಟಿ ಲಸಿಕೆ ಉತ್ಪಾದಿಸುವುದಾಗಿ ಕಂಪನಿ ತಿಳಿಸಿದೆ.

# ಕೋವಿಡ್ ಪರೀಕ್ಷೆಗೆ ಭಯ ಬೇಡ : ಬಿ.ಪಿ. ಹರೀಶ್

ಹರಿಹರ, ಜೂ.3- ಗ್ರಾಮೀಣ ಭಾಗದ ಜನತೆ ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳಲು ಹಾಗೂ ಚಿಕಿತ್ಸೆ ಪಡೆಯಲು ಭಯ ಪಡುವ ಅಗತ್ಯವಿಲ್ಲ ಎಂದು ಮಾಜಿ ಶಾಸಕ ಬಿ.ಪಿ. ಹರೀಶ್ ಹೇಳಿದರು.

ನಗರದ ಸಾರ್ವಜನಿಕ ಆಸ್ಪತ್ರೆ ಆವರಣದಲ್ಲಿ ಇಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತಾಲ್ಲೂಕಿನ ಗ್ರಾಮೀಣ ಭಾಗದ ಹಲವರು ಕೋವಿಡ್ ಲಕ್ಷಣಗಳಿದ್ದರೂ ಸ್ಥಳೀಯ ವೈದ್ಯರ ಹತ್ತಿರ ಚಿಕಿತ್ಸೆ ಪಡೆಯದೇ ತಾವೇ ಸ್ವಯಂ ಔಷಧಿ ಸೇವನೆ ಮಾಡುತ್ತಿರುವುದು ಅಪಾಯಕಾರಿಯಾಗಿದೆ. ಅಗತ್ಯಕ್ಕಿಂತ ಹೆಚ್ಚು ಅಥವಾ ತಪ್ಪು ಔಷಧಿ ಸೇವನೆಯಿಂದ ಸ್ವತಃ ಪ್ರಾಣಕ್ಕೆ ಅಪಾಯ ತಂದುಕೊಳ್ಳುವುದು ಅಥವಾ ಪಾಸಿಟಿವ್ ಇದ್ದು ಸೂಕ್ತ ಚಿಕಿತ್ಸೆ ಪಡೆಯದಿದ್ದರೆ ಕುಟುಂಬದ ಇತರೆ ಸದಸ್ಯರು ಹಾಗೂ ನೆರೆಹೊರೆಯವರಿಗೂ ಸೋಂಕು ಹರಡಲಿದೆ ಎಂದು ಎಚ್ಚರಿಸಿದರು.

ನಾನು ಇತ್ತೀಚಿಗೆ ತಾಲ್ಲೂಕಿನ 24 ಗ್ರಾ.ಪಂ. ಗಳಿಗೆ ಭೇಟಿ ನೀಡಿ ಗ್ರಾ.ಪಂ. ಸದಸ್ಯರು, ಸಿಬ್ಬಂದಿ, ಆಶಾ, ಅಂಗನವಾಡಿ ಕಾರ್ಯಕರ್ತೆಯರನ್ನು ಭೇಟಿ ಮಾಡಿ ಚರ್ಚಿಸಿದ್ದೇನೆ. ಅವರೆಲ್ಲರೂ ಗ್ರಾಮಸ್ಥರ ಅಸಹಕಾರ ಹಾಗೂ ವಿನಾಕಾರಣ ಸಂದೇಹದ ಕುರಿತು ಹೇಳಿದ್ದಾರೆ. ಟೆಸ್ಟ್ ಮಾಡಲು ಅಥವಾ



ಟೆಸ್ಟ್ ಮಾಡಿಸಿ ಪಾಸಿಟಿವ್ ಬಂದವರನ್ನು ಕೋವಿಡ್ ಕೇರ್ ಸೆಂಟರ್‌ಗೆ ಕರೆದೊಯ್ಯಲು ಬಂದರೆ ಹಲವು ಗ್ರಾಮಗಳಲ್ಲಿ ಜನರು ಕೈಗೆ ಸಿಗದೆ ಪರಾರಿಯಾದ ಘಟನೆಗಳು ನಡೆದಿವೆ ಎಂದರು.

**ರೆಸಾರ್ಟ್‌ನಂತಿದೆ:** ತಾಲ್ಲೂಕಿನ ಗುತ್ತೂರು, ಕೊಂಡಜ್ಜಿ ಮತ್ತು ನಗರದ ಎಸ್‌ಜೆವಿಪಿ ಕಾಲೇಜಿನ ಹಾಸ್ಟೆಲ್‌ನಲ್ಲಿ ಕೋವಿಡ್ ಕೇರ್ ಸೆಂಟರ್ ಇದೆ. ಲಘು ಲಕ್ಷಣಗಳಿದ್ದವರಿಗೆ ಕೇರ್ ಸೆಂಟರ್‌ನಲ್ಲಿಟ್ಟು ಚಿಕಿತ್ಸೆ ನೀಡಲಾಗುತ್ತಿದೆ. ಈ ಪೈಕಿ ಕೊಂಡಜ್ಜಿ ಕೇರ್ ಸೆಂಟರ್ ರೆಸಾರ್ಟ್‌ನಂತಿದೆ. ಎಲ್ಲಾ ಕೇರ್ ಸೆಂಟರ್‌ಗಳಲ್ಲಿ ನಿವಾಸಿಗಳಿಗೆ ಉತ್ತಮ ತಿಂಡಿ, ಎರಡು ಹೊತ್ತು ಊಟ ನೀಡಲಾಗುತ್ತಿದೆ. ಜೊತೆಗೆ ಮೊಟ್ಟೆ, ಬಾಳೆಹಣ್ಣು, ಕಷಾಯ, ಅಗತ್ಯ ಔಷಧಿ ನೀಡಲಾಗುತ್ತಿದೆ. ಬೆಳಿಗ್ಗೆ ವ್ಯಾಯಾಮ, ಯೋಗ ಮಾಡಿಸಲಾಗುತ್ತಿದೆ. ಶೌಚಾಲಯ, ಬಿಸಿ ನೀರು ಸೇರಿದಂತೆ ಇತರೆ ಸೌಲಭ್ಯಗಳು ಲಭ್ಯವಿವೆ ಎಂದರು.

**ಅಧಿಕಾರಿಗಳಿಗೆ ಹಣ ಬರುವುದಿಲ್ಲ:** ಕೋವಿಡ್ ಕೇರ್ ಸೆಂಟರ್ ಅಥವಾ ಆಸ್ಪತ್ರೆಗೆ ಸೇರಿಸಿಕೊಂಡು ಕೋವಿಡ್ ರೋಗಿಗಳಿಗೆ ಚಿಕಿತ್ಸೆ ನೀಡಿದರೆ ಅಧಿಕಾರಿಗಳಿಗೆ ಲಕ್ಷಾಂತರ ರೂ. ಆದಾಯ ಬರುತ್ತದೆ ಎಂಬ ತಪ್ಪು ಕಲ್ಪನೆ ಜನರಲ್ಲಿ ಇದೆ. ಆ ರೀತಿ ಯಾವುದೇ ಹಣ ಬರುವುದಿಲ್ಲ. ಸೋಂಕಿತರು

**ಕೋವಿಡ್ ಲಕ್ಷಣಗಳಿರುವ ರೋಗಿಗಳು ಖಾಸಗಿ ವೈದ್ಯರಲ್ಲಿಗೆ ಬಂದಾಗ, ಕೋವಿಡ್ ಪರೀಕ್ಷೆ ಮಾಡಿಸಿ, ಸೋಂಕು ದೃಢಪಟ್ಟರೆ ತಕ್ಷಣ ಅವರಿಗೆ ಸಲಹೆ ನೀಡಿ ಕೋವಿಡ್ ಕೇರ್ ಸೆಂಟರ್‌ಗೆ ಸೇರಿಸಲು ಆದ್ಯತೆ ನೀಡಬೇಕು. ಔಷಧಿ ಬರೆದು ಕೊಟ್ಟು ಮನೆಗೆ ಕಳಿಸಿದರೆ ಅಂತಹವರು ಮತ್ತಷ್ಟು ಜನರಿಗೆ ಸೋಂಕು ಹಬ್ಬಿಸುವ ಕೆಲಸ ಮಾಡುತ್ತಾರೆ. ಇದು ತಾಲ್ಲೂಕಿನಲ್ಲಿ ಸೋಂಕಿತರು ಹೆಚ್ಚಾಗಲು ಮತ್ತೊಂದು ಕಾರಣವಾಗುತ್ತದೆ.**

**– ಬಿ.ಪಿ. ಹರೀಶ್, ಮಾಜಿ ಶಾಸಕ**

ಚಿಕಿತ್ಸೆ ಪಡೆಯಬೇಕೆಂದು ಸರ್ಕಾರ ಮತ್ತು ಅಧಿಕಾರಿಗಳು ಆದ್ಯತೆ ನೀಡುತ್ತಿರುವುದು ಸೋಂಕು ಮತ್ತಷ್ಟು ಜನರಿಗೆ ಹಬ್ಬಬಾರದು ಎಂಬ ಒಂದೇ ಕಾರಣದಿಂದ ಎಂದರು.

ಈ ಸಂದರ್ಭದಲ್ಲಿ ಬಿಜೆಪಿ ಮುಖಂಡರಾದ ಅಜಿತ್ ಸಾವಂತ್, ಆಸ್ಪತ್ರೆ ರಕ್ಷಾ ಸಮಿತಿಯ ಮಂಜುನಾಥ್, ರಾಜು ಐರಣಿ, ಶಾಂತರಾಜ್, ವಿನಾಯಕ, ಆರಾಧ್ಯ, ಆಚಾರ್, ಬೆಣ್ಣೆ ವಿಜಯ್ ಕುಮಾರ್ ಇತರರು ಉಪಸ್ಥಿತರಿದ್ದರು.

# ಲಾಕ್‌ಡೌನ್ ನಡುವೆ ಬೆಲೆ ಏರಿಕೆ ಬಿಸಿ

## ಹರಿಹರದಲ್ಲಿ ಅಂತರ ಮರೆತು ಖರೀದಿಗಿಳಿದ ಜನರು



ಹರಿಹರ, ಜೂ.3- ಕೊರೊನಾ ರೋಗ ಹಾಗೂ ಲಾಕ್‌ಡೌನ್‌ನಿಂದ ಉದ್ಭವಿಸಿರುವ ಸಮಸ್ಯೆಗಳು ಈಗಾಗಲೇ ಸಾರ್ವಜನಿಕರನ್ನು ತಲ್ಲಣಗೊಳಿಸಿದ್ದು, ಇದರ ಜೊತೆಗೆ ಹಣ್ಣು-ತರಕಾರಿ, ದಿನಸಿ ಪದಾರ್ಥಗಳು, ಮಟನ್, ಚಿಕನ್ ಬೆಲೆಗಳು ಗಗನಕ್ಕೇರಿ ಗಾಯದ ಮೇಲೆ ಬರೆ ಎಳೆದಂತಾಗಿದೆ.

ನಗರಸಭೆ, ತಾಲ್ಲೂಕು ಆಡಳಿತ, ಆರೋಗ್ಯ ಇಲಾಖೆ, ತಾ.ಪಂ. ಕಚೇರಿ, ಬಿಸಿಎಂ ಇಲಾಖೆ, ಕೃಷಿ ಇಲಾಖೆ, ಪೊಲೀಸ್ ಇಲಾಖೆ, ಶಿಕ್ಷಣ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳು ಪ್ರತಿನಿತ್ಯವೂ ಜವಾಬ್ದಾರಿಯಿಂದ ಕೊರೊನಾ ತೊಲಗಿಸಲು ಹಗಲು, ರಾತ್ರಿ ಎನ್ನದೆ ಶ್ರಮವಹಿಸಿ ಕೆಲಸ ಮಾಡುತ್ತಿದ್ದು, ತಾಲ್ಲೂಕು ಆಡಳಿತ ಎಲ್ಲಾ ಇಲಾಖೆಯಲ್ಲಿ ಯಾವುದೇ ತೊಂದರೆ ಬರದಂತೆ ಬೇಕಾಗುವ ಸೌಲಭ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಶ್ರಮಿಸುತ್ತಿದೆ.

ಇಂತಹ ಸಂದರ್ಭದಲ್ಲಿ ಕೆಲವು ದಿನಸಿ ಅಂಗಡಿಯವರು ಮತ್ತು ತರಕಾರಿ ಅಂಗಡಿಯವರು, ಪಾನ್‌ಬೀಡಾ ಅಂಗಡಿಯವರು ದುಪ್ಪಟ್ಟು ದರಗಳಲ್ಲಿ ವಸ್ತುಗಳನ್ನು ಮಾರಾಟ ಮಾಡುವುದಕ್ಕೆ ಮುಂದಾಗಿದ್ದಾರೆ.

ಅಕ್ಕಿ 25 ಕೆ.ಜಿ. ಪಾಕೆಟ್ 1000 ದಿಂದ 1400 ರೂ. ಎಣ್ಣೆ ಟಿನ್ 2,700 ರೂ., ಬೇಳೆ ಕೆ.ಜಿ. 100 ರೂ., ಸಕ್ಕರೆ ಕೆ.ಜಿ. 45 ರೂ., ಟೀ ಪುಡಿ ಕೆ.ಜಿ. 240 ರೂ. , ಮತ್ತು ಎಲ್ಲಾ ಕಾಳುಗಳ ದರದಲ್ಲಿ ಏರಿಕೆಯಾಗಿದೆ. ತರಕಾರಿ ಈರುಳ್ಳಿ ಕೆ.ಜಿ. 30 ರೂ., ಬೀನ್ಸ್ 100 ರೂ., ಕ್ಯಾರೆಟ್ 60 ರೂ.,

**ತರಕಾರಿ ವ್ಯಾಪಾರಸ್ಥರಿಗೆ ದರಪಟ್ಟಿ ನೀಡಲಾಗಿದೆ. ದರಪಟ್ಟಿ ಬಿಟ್ಟು, ಇಷ್ಟ ಬಂದಂತೆ ದರ ಏರಿಸಿ ಮಾರಾಟ ಮಾಡುತ್ತಿರುವುದು ನಮ್ಮ ಗಮನಕ್ಕೆ ಕ್ರಮ ಕೈಗೊಳ್ಳಲಾಗುವುದು.**

**ಎಸ್. ಲಕ್ಷ್ಮಿ, ಪೌರಾಯುಕ್ತೆ**

ಬೆಂಡೆಕಾಯಿ 40 ರೂ., ಮೆಣಸಿನಕಾಯಿ 40 ರೂ., ಹೀರೆಕಾಯಿ 80 ರೂ., ಜವಳಿಕಾಯಿ 40 ರೂ., ಆಲೂಗೆಡ್ಡೆ 40 ರೂ., ಬೆಳ್ಳುಳ್ಳಿ 80 ರೂ., ಹುಣಸೆ ಹಣ್ಣು 120 ರೂ., ಟೊಮ್ಯಾಟೋ 20 ರೂ., ಕೊತ್ತಂಬರಿ ಸೊಪ್ಪು 10 ರೂ., ಮೆಂತೆ 10 ರೂ., ಪುದೀನಾ 8, ಸಬಸ್ಸಿಗೆ 15, ಮೂಲಂಗಿ 20 ರೂಪಾಯಿಗೆ ಮೂರು, ಹೀಗೆ ವಿವಿಧ ತರಕಾರಿಗಳ ದರ ಏರಿಕೆಯಾಗಿದ್ದರೆ, ಗುಟ್ಕಾ, ಸಿಗರೇಟ್, ಮಟನ್, ಚಿಕನ್, ಬೆಲೆ ಕೇಳುವ ಹಾಗೆಯೇ ಇರಲಿಲ್ಲ.

ಸೋಮವಾರ ಮತ್ತು ಗುರುವಾರ ಬೆಳಗ್ಗೆ 6 ಗಂಟೆಯಿಂದ 12 ಗಂಟೆಯವರೆಗೆ ಲಾಕ್ ಡೌನ್ ಸಡಿಲಿಸಿ ಸಾರ್ವಜನಿಕರು ವಸ್ತುಗಳನ್ನು ಖರೀದಿಸಲು ಅವಕಾಶ ನೀಡಲಾಗಿದ್ದು, ಗಾಂಧಿ ಮೈದಾನದಲ್ಲಿ ಜನರ ದಂಡೇ ನೆರೆದಿತ್ತು. ಸಾಮಾಜಿಕ ಅಂತರ ಮರೆತಿದ್ದರು. ಕೆಲವರಂತೂ ಮಾಸ್ಕ್ ಧರಿಸದೆ ಬೀದಿಗಿಳಿದಿದ್ದರು.

# ನಗರ ಪಾಲಿಕೆ 33 ನೇ ವಾರ್ಡ್‌ನಲ್ಲಿ ಲಸಿಕಾ ಅಭಿಯಾನ

ದಾವಣಗೆರೆ, ಜೂ.3- ಮಹಾನಗರ ಪಾಲಿಕೆಯ 33 ನೇ ವಾರ್ಡ್‌ನ ಸರಸ್ವತಿ ನಗರದಕೆ.ಎಸ್.ಎಸ್.ಕಾಲೇಜಿನಲ್ಲಿಎರಡನೇ ಡೋಸ್ ಕೋವ್ಯಾಕ್ಸಿನ್ ಲಸಿಕಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಮಹಾನಗರ ಪಾಲಿಕೆ ಸದಸ್ಯ ಕೆ.ಎಂ. ವೀರೇಶ್ ಅವರು, ಈ ಕಾರ್ಯಕ್ರಮವನ್ನು ಸರಸ್ವತಿ ನಗರ ಹಾಗೂ ಸುತ್ತಮುತ್ತಲಿನ ನಿವಾಸಿಗಳಿಗೆ ವಿಶೇಷ ಮುತುವರ್ಜಿಯಿಂದ ಜಿಲ್ಲಾ ಆರೋಗ್ಯ ಇಲಾಖೆಯ ಸಹಕಾರದೊಂದಿಗೆ ಆಯೋಜಿಸಿದ್ದರು.

ಲಸಿಕೆ ವಿತರಣಾ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ವೀರೇಶ್, ಸರ್ಕಾರ ಪ್ರತಿಯೊಬ್ಬರಿಗೂ ಲಸಿಕೆ ನೀಡಲು ಬದ್ಧವಾಗಿದೆ. ಸರಸ್ವತಿ ನಗರದಲ್ಲಿ ಇಂದು ಎರಡನೇ ಕ್ಯಾಂಪ್ ನಡೆಯುತ್ತಿದೆ. ದಿನದಿಂದ ದಿನಕ್ಕೆ ಸೋಂಕಿತರ ಸಂಖ್ಯೆಯೂ




ಕಡಿಮೆಯಾಗುತ್ತಿದೆ. ಸಾರ್ವಜನಿಕರು ಅತೀ ಎಚ್ಚರಿಕೆಯಿಂದ ಇರಬೇಕಾಗಿದೆ. ಹಲವರು ಮಾಸ್ಕ್ ಧರಿಸದೇ ಇರುವುದು ಅಥವಾ ಸರಿಯಾದ ವಿಧಾನದಲ್ಲಿ ಮಾಸ್ಕ್ ಧರಿಸದಿರುವುದನ್ನು ಗಮನಿಸುತ್ತಿದ್ದೇವೆ. ಮಾಸ್ಕ್ ಧರಿಸುವ ವಿಚಾರದಲ್ಲಿ ಅಸಡ್ಡೆ ಮಾಡಬೇಡಿ. ಸರ್ಕಾರದ ಎಲ್ಲಾ ಅಗತ್ಯ ಕೋವಿಡ್ ನಿಯಮಗಳನ್ನು ಪಾಲಿಸುವುದರೊಂದಿಗೆ ನಾವು ಆರೋಗ್ಯವಾಗಿರುವುದರ ಜೊತೆಗೆ ನಮ್ಮ ಸುತ್ತಮುತ್ತಲಿನವರು ಕೂಡಾ ಆರೋಗ್ಯದಿಂದಿರಲು ಸಹಕರಿಸಬೇಕೆಂದು ಅವರು ಮನವಿ ಮಾಡಿದರು.

**ಮಾಸ್ಕ್ ಧರಿಸಲು ಅಸಡ್ಡೆ ಬೇಡ : ಕೆ.ಎಂ. ವೀರೇಶ್**

ಕಾರ್ಯಕ್ರಮದಲ್ಲಿ ಬಿಜೆಪಿ ಮುಖಂಡ ಹಾಗೂ ಶ್ರೀ ಸೋಮೇಶ್ವರ ವಿದ್ಯಾಲಯದ ಕಾರ್ಯದರ್ಶಿ ಕೆ.ಎಮ್.ಸುರೇಶ್, ಕೆಎಸ್ಎಸ್ ಕಾಲೇಜಿನ ಹೆಚ್.ಕೆ.ಬಸವರಾಜ್, ಬಿಜೆಪಿ ಜಿಲ್ಲಾ ಎಸ್‌ಸಿ ಮೋರ್ಚಾ ಅಧ್ಯಕ್ಷ ಎನ್.ಹನುಮಂತ ನಾಯ್ಕ್, ಮಹಾನಗರ ಪಾಲಿಕೆ ಸದಸ್ಯರಾದ ಎನ್.ಮಂಜುನಾಥ ನಾಯ್ಕ್, ಪಿ.ಎಸ್.ಬಸವರಾಜ್, ಸೋಮಶೇಖರ್, ಹೆಚ್.ಟಿ.ವಿರುಪಾಕ್ಷಪ್ಪ, ವಿ.ಸಿದ್ದೇಶ್, ಸಂತೋಷ್ ಒಡೆಯರ್, ಶಶಿಧರ್, ತೋಟದ ವಿಜಯಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

# ಕಲಾವಿದರ ಆರ್ಥಿಕ ನೆರವಿಗೆ ವಯೋಮಿತಿ ಸಲ್ಲದು



ಸಿರಿಗೆರೆ, ಜೂ. 3- 35 ವರ್ಷದ ಮೇಲಿನ ಕಲಾವಿದರಿಗೆ ಪರಿಹಾರ ನೀಡಬೇಕು ಎನ್ನುವ ನಿಯಮ ಅವೈಜ್ಞಾನಿಕ ಎಂದು ಸಾಣೇಹಳ್ಳಿ ಪಂಡಿತಾರಾಧ್ಯ ಶ್ರೀಗಳು ಹೇಳಿದ್ದಾರೆ.

ಪ್ರಸ್ತುತ ದಿನಗಳಲ್ಲಿ ರಂಗ ಕಲಾವಿದರು ತುಂಬಾ ಯಾತನೆ ಅನುಭವಿಸುತ್ತಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅವರಿಗೆ ಪರಿಹಾರ ವಿತರಿಸುವಲ್ಲಿ ಅನೇಕ ದಿಗ್ಬಂಧನ ವಿಧಿಸುತ್ತಿದೆ. 'ದೇವರು ವರ ಕೊಟ್ಟರೂ ಪೂಜಾರಿ ವರ ಕೊಡಲಿಲ್ಲ' ಅನ್ನುವ ಸ್ಥಿತಿ ನಿರ್ಮಾಣವಾಗುತ್ತಿದೆ ಎಂದು ಶ್ರೀಗಳು ಬೇಸರ ವ್ಯಕ್ತಪಡಿಸಿದರು.

ರಂಗ ಚಟುವಟಿಕೆಯಲ್ಲಿ ತೊಡಗಿಕೊಳ್ಳುವರು. ವರ್ಷದುದ್ದಕ್ಕೂ ಕ್ರಿಯಾಶೀಲರಾಗಿರುತ್ತಾರೆ. ಅವರು ರಂಗಶಾಲೆ ಸೇರಿದಾಗ ಬಹಳ ಎಂದರೆ 20 ವರ್ಷ. ಮುಂದೆ ನಾಲ್ಕಾರು ವರ್ಷ ರಂಗಭೂಮಿಯನ್ನೇ ನಂಬಿಕೊಂಡು ದುಡಿಯುತ್ತಾರೆ. ಆದರೂ ಅವರಿಗೆ 35 ವರ್ಷ ಆಗಿರುವುದಿಲ್ಲ.

35 ವರ್ಷದ ಮೇಲ್ಪಟ್ಟವರಿಗೆ ಆರ್ಥಿಕ ನೆರವು ನೀಡಲಾಗುವುದು ಎಂದರೆ, ಕಡಿಮೆ ವಯಸ್ಸಿರುವ ಕಲಾವಿದರು ಏನು ಮಾಡಬೇಕು? ಎಂದು ಪ್ರಶ್ನಿಸಿದ ಶ್ರೀಗಳು, ಕ್ರಮ ಅಮಾನವೀಯ ಮತ್ತು ಅತಾರ್ಕಿಕ ಎನ್ನುವುದನ್ನು ಇಲಾಖೆಯ ಅಧಿಕಾರಿಗಳು ಅರ್ಥ ಮಾಡಿಕೊಳ್ಳಬೇಕು. ಈ ಬಗ್ಗೆ ಸರ್ಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಗಂಭೀರ ಚಿಂತನೆ ನಡೆಸಿ, ನಿಯಮಗಳನ್ನು ಬದಲಾಯಿಸಿ ಎಲ್ಲ ಕಲಾವಿದರಿಗೂ ಸಹಾಯ ಮಾಡಬೇಕೆಂದು ಕಲಾವಿದರ ಪರವಾಗಿ ಒತ್ತಾಯಿಸಿದ್ದಾರೆ.

## ಸಾಂಪ್ರದಾಯಿಕ ವೃತ್ತಿಪರ ಕುಲಕಸುಬಿನವರಿಗೆ ನೆರವು ನೀಡಿ

ದಾವಣಗೆರೆ, ಜೂ.3- ಹಿಂದುಳಿದ ವರ್ಗಗಳ ಸಂಘಟಿತ ಹಾಗೂ ಅಸಂಘಟಿತ ಸಾಂಪ್ರದಾಯಿಕ ವೃತ್ತಿಪರ ಕುಲಕಸುಬಿನ ವೃತ್ತಿಯನ್ನು ನಡೆಸುತ್ತಿರುವ ಎಲ್ಲಾ ರೀತಿಯ ಜನತೆಗೆ ಸರ್ಕಾರ ಕೊರೊನಾ ಸಂಕಷ್ಟ ಸಮಯದಲ್ಲಿ ಆರ್ಥಿಕ ನೆರವು ನೀಡುವಂತೆ ಕರ್ನಾಟಕ ರಾಜ್ಯ ಉಪ್ಪಾರ ಮಹಾಸಭಾ ಮುಖ್ಯಮಂತ್ರಿಯವರಿಗೆ ಮನವಿ ಮಾಡಿದೆ.

ಸದ್ಯದ ಪರಿಸ್ಥಿತಿಯಲ್ಲಿ ಜೀವನೋಪಾಯಕ್ಕಾಗಿ 10,000 ರೂಪಾಯಿಯ ಆರ್ಥಿಕ ನೆರವು ನೀಡಲೇಬೇಕು. ರಾಜ್ಯದ ಜನತೆಗೆ ಉಚಿತವಾಗಿ ವಿದ್ಯುತ್ ಮತ್ತು ನೀರಿನ ಪೂರೈಕೆ ಸರಬರಾಜು ನೀಡಲು ಮಹಾಸಭೆ ಒತ್ತಾಯಿಸಿದೆ. ನೆಪ ಮಾತ್ರಕ್ಕೆ 2,000 ರೂ. ವಿಶೇಷ ಪ್ಯಾಕೇಜ್ ಘೋಷಣೆ ಮಾಡುವುದಲ್ಲ. ಆದೇಶ ಮರುಪರಿಶೀಲನೆ ಮಾಡಿ, ಪ್ರತಿಯೊಬ್ಬ ಫಲಾನುಭವಿಗಳಿಗೂ ಕೂಡಲೇ 10,000 ರೂಪಾಯಿಗಳನ್ನು ನೀಡಬೇಕು ಎಂದು ಮಹಾಸಭಾದ ಕಾರ್ಯಾಧ್ಯಕ್ಷ ಭರತ್ ಎಸ್. ಮೈಲಾರ್ ಕೋರಿದ್ದಾರೆ.

# ಖರೀದಿ ನೂಕು ನುಗ್ಗಲಿಗೆ ವರುಣನ ಬ್ರೇಕ್

**(1ನೇ ಪುಟದಿಂದ)** ಗ್ರಾಹಕರು ಸರದಿಯಲ್ಲಿ ನಿಂತು ಖರೀದಿಸಿದರು. ದಿನಸಿ ಅಂಗಡಿಗಳಲ್ಲಿ ಕೆಲಸ ವಸ್ತುಗಳು ಸ್ಟಾಕ್ ಇಲ್ಲ ಎನ್ನುತ್ತಿದ್ದುದು ಕಂಡು ಬಂತು. ಎಲ್ಲೆಡೆ ಉತ್ತಮ ಮಳೆಯಾಗುತ್ತಿರುವುದರಿಂದ ರೈತರು ಬಿತ್ತನೆ ಬೀಜ, ಗೊಬ್ಬರ ಖರೀದಿಸುತ್ತಿದ್ದರು.

**ರಸ್ತೆಯಲ್ಲಿ ನೀರು :** ಸುಮಾರು ಎರಡು ತಾಸು ಒಂದೇ ಸಮನೆ ಸುರಿದ ಮಳೆಯಿಂದಾಗಿ ರೈಲ್ವೇ ನಿಲ್ದಾಣದ ಪಕ್ಕ ಹಾಗೂ ಎಪಿಎಂಸಿ ಬಳಿಯ ರೈಲ್ವೇ ಕೆಳ ಸೇತುವೆಗಳಲ್ಲಿ ನೀರು ತುಂಬಿಕೊಂಡ ಪರಿಣಾಮ ರೈಲ್ವೇ ಹಳಿಯಿಂದ ಈಚೆ ಬರುವವರು ಹಾಗೂ ಆಚೆ ಹೋಗುವವರು ಮೇಲ್ಸೇತುವೆಗಳನ್ನು ಬಳಸಿ ಬರಬೇಕಾಯಿತು.

**ಬಾರ್‌ಗಳೂ ರಶ್ :** ಬೆಳಿಗ್ಗೆಯೇ ಮದ್ಯಪ್ರಿಯರು ಬಾರ್‌ಗಳಗೆ ಆಗಮಿಸಿದ್ದ ಪರಿಣಾಮ ಬಹುತೇಕ ಬಾರ್‌ಗಳು ಮದ್ಯಪ್ರಿಯರಿಂದ ತುಂಬಿದ್ದವು. ಕೆಲಕಡೆ ಸರದಿಯಲ್ಲಿ ನಿಂತು ಮದ್ಯ ಖರೀದಿಸುತ್ತಿದ್ದರು.

**ಆಯುಕ್ತರ ಸಂಚಾರ:** ಮಹಾನಗರ ಪಾಲಿಕೆ ಆಯುಕ್ತ ವಿಶ್ವನಾಥ ಮುದಜ್ಜಿ ಹಾಗೂ ಸಿಬ್ಬಂದಿಗಳು ಮುಂಜಾನೆ ಮಾರುಕಟ್ಟೆಯಲ್ಲಿ ಸಂಚರಿಸಿ ಸಾಮಾಜಿಕ ಅಂತರದಿಂದ ವ್ಯವಹಾರ ನಡೆಸುವಂತೆ ಸೂಚಿಸಿದರು. ನಿಯಮ ಉಲ್ಲಂಘಿಸಿದ ಅಂಗಡಿಗಳಿಗೆ ದಂಡ ವಿಧಿಸಿದರು.

ಅಡುಗೆ ಎಣ್ಣೆ ಮಾರಾಟ ಮಾಡುವ ರೇಣುಕಾ ಎಂಟರ್ ಪ್ರೈಸಸ್ ಮಾಲೀಕರು ನಮಗೆ ಎಣ್ಣೆ ಸರಕು ಹೊತ್ತು ತರುವ ಲಾರಿಗಳಿಗೆ ರಾತ್ರಿ ಅನ್ ಲೋಡ್ ಮಾಡಲು ಅವಕಾಶವಿಲ್ಲ. ಜನ ಎಷ್ಟು ಹೇಳಿದರು



ಕೇಳುವುದಿಲ್ಲ. ದಿನಸಿ ವಸ್ತುಗಳನ್ನು ಹೊತ್ತು ತರುವ ಲಾರಿಗಳ ಸರಕು ಇಳಿಸಲು ಜಿಲ್ಲಾಡಳಿತ ಅವಕಾಶ ನೀಡಬೇಕು ಎಂದು ಪಾಲಿಕೆ ಆಯುಕ್ತರ ಬಳಿ ಕೆಲ ವರ್ತಕರು ಮನವಿ ಮಾಡಿದರು.

ಲಯನ್ ವಾಹನ, ಪಾಲಿಕೆಯ ಕಸ ವಿಲೇವಾರಿ ಆಟೋಗಳು ಕಾರ್ಯಾಚರಣೆಯಲ್ಲಿ ಇದ್ದವು. ಪದೇ ಪದೇ ಮಾತು ಕೇಳದ ತರಕಾರಿ ಮಾರುವ ಗಾಡಿಗಳನ್ನು ಪಾಲಿಕೆ ವಶಕ್ಕೆ ಪಡೆಯಲಾಯಿತು.

ಸಿಟಿ ಡಿವೈಎಸ್‌ಪಿ ನಾಗೇಶ್ ಐತಾಳ್, ಸಿಪಿಐ ಗಜೇಂದ್ರಪ್ಪ, ಉತ್ತರ ಸಂಚಾರಿ ಪಿಎಸ್‌ಐ ಇಮ್ರಾನ್, ಪೌರ ಕಾರ್ಮಿಕರು, ಸಿಬ್ಬಂದಿಗಳು ಮಾರುಕಟ್ಟೆ ಪ್ರದೇಶದಲ್ಲಿ ಅನಾನುಕೂಲವಾಗದಂತೆ ನೋಡಿಕೊಂಡರು.

# ತಂಬಾಕು ಸೇವನೆಯಿಂದ ಕೊರೊನಾ ಸಾಧ್ಯತೆ



ದಾವಣಗರೆ, ಜೂ.3- ತಂಬಾಕು ಸೇವನೆ ಮಾಡುವವರಿಗೆ ಕೊರೊನಾ ಸೋಂಕು ತಗಲುವ ಸಾಧ್ಯತೆ ಹೆಚ್ಚಾಗಿರುತ್ತದೆ ಎಂದು ತಾಲ್ಲೂಕು ಆರೋಗ್ಯಾಧಿಕಾರಿ ಡಾ. ವೆಂಕಟೇಶ್ ಹೇಳಿದರು.

ತಾಲ್ಲೂಕು ಆಡಳಿತ, ತಾಲ್ಲೂಕು ಪಂಚಾಯತ್, ತಾಲ್ಲೂಕು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ತಂಬಾಕು ನಿಯಂತ್ರಣ ಕೋಶ ಇವರ ಸಂಯುಕ್ತಾಶ್ರಯದಲ್ಲಿ 'ತಂಬಾಕು ತ್ಯಜಿಸಲು ಬದ್ಧರಾಗಿರಿ' ಎಂಬ ಘೋಷವಾಕ್ಯದಡಿ ಮೇ 31ರ ಸೋಮವಾರದಂದು ಭರತ್ ಕಾಲೋನಿಯ ನಗರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸರಳವಾಗಿ ಏರ್ಪಡಿಸಲಾದ ವಿಶ್ವ ತಂಬಾಕು ರಹಿತ ದಿನ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ತಂಬಾಕು ಬಳಕೆ ಮಾಡುವವರಲ್ಲಿ ಕೊರೊನಾ ಸೋಂಕು ಹರಡುವ ಸಾಧ್ಯತೆ ಹೆಚ್ಚಾಗಿ ಇರುತ್ತದೆ. ತಂಬಾಕು ಉತ್ಪನ್ನಗಳ ಸೇವನೆ ಮಾಡುವವರ ಶ್ವಾಸಕೋಶ ಹಲವಾರು ದಿನಗಳಿಂದ ತಂಬಾಕು ಬಳಸಿದ ಕಾರಣಗಳಿಂದ ದುರ್ಬಲ ವಾಗಿರುತ್ತದೆ. ಹೀಗಾಗಿ ತಂಬಾಕು ತ್ಯಜಿಸಲು ಲಾಕ್‌ಡೌನ್ ಸಮಯ ಅತೀ ಸೂಕ್ತವಾಗಿದೆ. ತಂಬಾಕು ಬಳಸುವವರು ತ್ಯಜಿಸಲು ಬದ್ಧರಾಗಿರಿ ಎಂದು ಈ ಮೂಲಕ ವಿನಂತಿಸಿಕೊಳ್ಳುತ್ತೇನೆ ಎಂದು ಡಾ. ವೆಂಕಟೇಶ್ ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ವೈದ್ಯಾಧಿಕಾರಿ ಡಾ. ಸುನಿತಾ, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಉಮಾಪತಿ, ಜಿಲ್ಲಾ ಸಲಹೆಗಾರ ಸತೀಶ್ ಕಲಹಾಳ್, ದೇವರಾಜ್ ಕೆ.ಪಿ ಸಮಾಜ ಕಾರ್ಯಕರ್ತ ಸಿಬ್ಬಂದಿ ಹಾಗೂ ಆಶಾ ಕಾರ್ಯಕರ್ತೆಯರು ಹಾಜರಿದ್ದರು.

## ಜಿಲ್ಲೆಯಲ್ಲಿ 559 ಪಾಸಿಟಿವ್, 7 ಸಾವು

**(1ನೇ ಪುಟದಿಂದ)** ವರ್ಷದ ಪುರುಷ, ಹಿಂಡಸಘಟ್ಟದ 67 ವರ್ಷದ ಮಹಿಳೆ, ಗುತ್ತೂರು ಗ್ರಾಮದ 55 ವರ್ಷದ ಪುರುಷ, ದಾವಣಗೆರೆ ತಾಲ್ಲೂಕಿನ ಕೋಳೇನಹಳ್ಳಿಯ 45 ವರ್ಷದ ಪುರುಷ, ದೊಡ್ಡಬೂದಿಹಾಳ್‌ನ 44 ವರ್ಷದ ಮಹಿಳೆ, ಒಕ್ಕಲಿಗರ ಪೇಟೆಯ 61 ವರ್ಷದ ಪುರುಷ, ಕೋಡಿಹಳ್ಳಿಯ 32 ವರ್ಷದ ಪುರುಷ ಕೊರೊನಾ ಸೋಂಕಿನಿಂದ ಮೃತಪಟ್ಟಿದ್ದಾರೆ,

ಜಿಲ್ಲೆಯಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ 3930ಕ್ಕೆ ಏರಿದೆ.

## ದೆಹಲಿ ಪಾಲಿಕೆಗಳಿಂದ 2 ತಿಂಗಳಲ್ಲಿ 35 ಸಾವಿರ ಮರಣ ಪ್ರಮಾಣ ಪತ್ರ

**ಸಾವಿನ ಪ್ರಮಾಣ ಶೇ.250ರಷ್ಟು ಹೆಚ್ಚಳ**

ನವದೆಹಲಿ, ಜೂ. 3 - ದೆಹಲಿಯ ಮೂರು ನಗರ ಪಾಲಿಕೆಗಳು ಏಪ್ರಿಲ್ ಹಾಗೂ ಮೇ ತಿಂಗಳಲ್ಲಿ 34,750 ಮರಣ ಪ್ರಮಾಣ ಪತ್ರಗಳನ್ನು ವಿತರಿಸಿವೆ. ಕಳೆದ ವರ್ಷಕ್ಕೆ ಹೋಲಿಸಿದರೆ ಸಾವಿನ ಪ್ರಮಾಣ ಶೇ.250ರಷ್ಟು ಹೆಚ್ಚಾಗಿದೆ.

ಕಳೆದ ವರ್ಷ ಇದೇ ಅವಧಿಯಲ್ಲಿ 9,916 ಮರಣ ಪ್ರಮಾಣ ಪತ್ರಗಳನ್ನು ವಿತರಿಸಲಾಗಿತ್ತು. ಈ ಬಾರಿ ಏಪ್ರಿಲ್ ಅಂತ್ಯದಲ್ಲಿ ತೀವ್ರಗೊಂಡ ಕೊರೊನಾ, ಮೇ ತಿಂಗಳಲ್ಲಿ ಉಲ್ಬಣಿಸಿತ್ತು.

ಕಳೆದ ವರ್ಷ ಮೇ ತಿಂಗಳಲ್ಲಿ 5,475 ಮರಣ ಪ್ರಮಾಣ ಪತ್ರಗಳನ್ನು ವಿತರಿಸಲಾಗಿತ್ತು. ಈ ವರ್ಷ ಮೇ ತಿಂಗಳಲ್ಲಿ 24 ಸಾವಿರಕ್ಕೂ ಹೆಚ್ಚು ಮರಣ ಪ್ರಮಾಣ ಪತ್ರಗಳನ್ನು ವಿತರಿಸಲಾಗಿದೆ ಎಂದು ಮಾಧ್ಯಮಗಳು ವರದಿ ಮಾಡಿವೆ.

# ಕೊರೊನಾದಿಂದ ಪೋಷಕರ ಕಳೆದುಕೊಂಡ ಮಕ್ಕಳಿಗೆ ನೆರವು

ಬೆಂಗಳೂರು, ಜೂ. 3 - ಕೊರೊನಾದಿಂದ ಪೋಷಕರನ್ನು ಕಳೆದುಕೊಂಡ ಮಕ್ಕಳ ದುಃಖದಲ್ಲಿ ಭಾಗಿಯಾಗಿ, ಅವರ ನೆರವಿಗೆ ನಿಲ್ಲುವುದು ನಮ್ಮ ಕರ್ತವ್ಯ. ಅಂತಹ ಮಕ್ಕಳೊಂದಿಗೆ ನಾವಿದ್ದೇವೆ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವೆ ಶಶಿಕಲಾ ಜೊಲ್ಲೆ ತಿಳಿಸಿದ್ದಾರೆ.

ಕೊರೊನಾದಿಂದ ಪೋಷಕರನ್ನು ಕಳೆದುಕೊಂಡ ಮಕ್ಕಳು ಹಾಗೂ ಅವರನ್ನು ಪಾಲನೆ ಮಾಡುತ್ತಿರುವ ಪಾಲಕರ ಜೊತೆಗೆ ಗೂಗಲ್ ಮೀಟ್ ಮೂಲಕ ವಿಡಿಯೋ ಸಂವಾದ ನಡೆಸಿ, ಅವರಿಗೆ ಸಾಂತ್ವನ ಹೇಳಿ, ಆತ್ಮಸ್ಥೈರ್ಯ ತುಂಬಿ, ಅವರ ಮನಸ್ಸಿನ ನೋವು, ಸಮಸ್ಯೆಗಳನ್ನು ಮನಗಂಡು, ಸರ್ಕಾರದಿಂದ ನೀಡಲಾಗುವ ನೆರವಿನ ಕುರಿತು ಮಾಹಿತಿ ನೀಡಿದರು.

ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ತಂದೆ ತಾಯಿಗಳನ್ನು ಕಳೆದುಕೊಂಡ 19 ಮಕ್ಕಳ ಜೊತೆಗೆ ಸಚಿವರು ಸುಮಾರು ಮೂರು ಗಂಟೆಗಳ ಕಾಲ ಪ್ರತಿಯೊಬ್ಬ ಮಗುವಿನ ಜೊತೆಗೂ ವೈಯಕ್ತಿಕವಾಗಿ ಚರ್ಚೆ ನಡೆಸಿ, ತಂದೆ-ತಾಯಿಗಳನ್ನು ಕಳೆದುಕೊಂಡ ಮಕ್ಕಳ ಪೋಷಕರ ಕಷ್ಟಗಳ ಬಗ್ಗೆ ಮಾಹಿತಿ ಪಡೆದರು.

ಕಷ್ಟದ ಸಂದರ್ಭದಲ್ಲಿ ಧೃತಿಗೆಡದೆ ಜೀವನದ ಸವಾಲುಗಳನ್ನು ಎದುರಿಸಿ

**ಮಕ್ಕಳ ಜೊತೆಗಿನ ವಿಡಿಯೋ ಸಂವಾದದಲ್ಲಿ ಸಚಿವೆ ಜೊಲ್ಲೆ ಭರವಸೆ**

ಸಮಾಜದಲ್ಲಿ ಗಣ್ಯ ವ್ಯಕ್ತಿಗಳಾಗಿ ಬೆಳೆಯುವಂತೆ ಮಕ್ಕಳಿಗೆ ಸಚಿವರು ಕಿವಿ ಮಾತು ಹೇಳಿದರು

ಈಗಾಗಲೇ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು 'ಬಾಲ ಸೇವಾ' ಯೋಜನೆಯನ್ನು ಘೋಷಿಸಿದ್ದಾರೆ. ಸರ್ಕಾರದಿಂದ ಸಿಗಬೇಕಾಗಿದ್ದ ಸೌಲಭ್ಯಗಳನ್ನು ಅತೀ ಶೀಘ್ರದಲ್ಲಿ ನೀಡುತ್ತೇವೆ. ಮುಂದೇನಾದರೂ ಅಗತ್ಯವಿದ್ದಲ್ಲಿ ಅಗತ್ಯ ನೆರವು ನೀಡಲು ಸರ್ಕಾರ ಸದಾ ಸಿದ್ಧವಿದೆ ಎಂದು ಹೇಳಿದರು.

ರಾಜ್ಯ ಸರ್ಕಾರ ಘೋಷಣೆ ಮಾಡಿರುವ ಬಾಲ ಸೇವಾ ಯೋಜನೆಯ ಬಗ್ಗೆ ಪ್ರತಿ ಗ್ರಾಮ ಮಟ್ಟದಲ್ಲಿಯೂ ಎಲ್ಲರಿಗೂ ತಲುಪುವಂತೆ ಮಾಡಲು ಎಲ್ಲ ಮಾಧ್ಯಮಗಳ ಮೂಲಕ ಜಾಗೃತಿ ಮೂಡಿಸಲಾಗುವುದು. ಸಾಮಾಜಿಕ ಜಾಲತಾಣ ಹಾಗೂ ಇತರೆ ಮಾಧ್ಯಮಗಳ ಮೂಲಕ ಜನರಿಗೆ ಮಾಹಿತಿ ಒದಗಿಸಲು ತೀರ್ಮಾನಿಸಲಾಗಿದೆ.

ತಂದೆ-ತಾಯಿ ಕಳೆದುಕೊಂಡ ಮಕ್ಕಳಿಗೆ ಘೋಷಣೆ ಮಾಡಿರುವ ಮಾಸಿಕ 3500 ರೂ. ನೀಡುವುದು. 10 ವರ್ಷದ ಒಳಗಿನ ಮಕ್ಕಳ ಶಿಕ್ಷಣಕ್ಕೆ ಸರ್ಕಾರಿ ವಸತಿ ಶಾಲೆಗಳಲ್ಲಿ ವ್ಯವಸ್ಥೆ ಕಲ್ಪಿಸುವುದು ಹಾಗೂ 21 ವರ್ಷ ಪೂರೈಸಿರುವ ತಂದೆ ತಾಯಿಗಳನ್ನು ಕಳೆದುಕೊಂಡ ಹೆಣ್ಣು ಮಕ್ಕಳಿಗೆ 1 ಲಕ್ಷ ರೂ. ಸಹಾಯಧನವನ್ನು ನೇರವಾಗಿ ಅವರ ಅಕೌಂಟ್‌ಗೆ ತಲುಪಿಸಲು ಇಲಾಖೆಯಿಂದ ಎಲ್ಲ ರೀತಿಯ ಕ್ರಮ ಕೈಗೊಳ್ಳಲಾಗುತ್ತಿದೆ.

ಈ ಯೋಜನೆ ಅನುಷ್ಠಾನದಲ್ಲಿ ಯಾವುದೇ ರೀತಿಯ ಮಧ್ಯವರ್ತಿಗಳ ಹಾವಳಿಯಾಗದಂತೆ ಕ್ರಮ ವಹಿಸಲು ತೀರ್ಮಾನಿಸಲಾಗಿದೆ ಎಂದು ಸಚಿವರು ತಿಳಿಸಿದ್ದಾರೆ.


## ಮಲೇಬೆನ್ನೂರು ಆರೋಗ್ಯ ಕೇಂದ್ರಕ್ಕೆ ಆಂಬ್ಯುಲೆನ್ಸ್, ನೀರು ಯಂತ್ರ ಕೊಡುಗೆ



ಮಲೇಬೆನ್ನೂರು, ಜೂ.3- ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ವೀರೇಶ್ ಅವರು ತಮ್ಮ ಹುಟ್ಟುಹಬ್ಬದ ಅಂಗವಾಗಿ ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರಕ್ಕೆ ಸಾರ್ವಜನಿಕರ ಸೇವೆಗಾಗಿ ಆಂಬ್ಯುಲೆನ್ಸ್ ಮತ್ತು ಬಿಸಿ ನೀರಿನ ಯಂತ್ರವನ್ನು ನೀಡಿದರು.

ವೈದ್ಯಾಧಿಕಾರಿ ಡಾ. ಲಕ್ಷ್ಮೀದೇವಿ, ವೈದ್ಯರಾದ ಡಾ. ನಿಸಾರ್, ಡಾ. ಕೆ. ಆರ್. ಗೌಡ್ರು, ಡಾ. ಸುಭಾಷ್, ಆರೋಗ್ಯ ರಕ್ಷಾ ಸಮಿತಿ ಸದಸ್ಯ ಬಿ. ಮಂಜುನಾಥ್, ಪುರಸಭೆ ಆಶ್ರಯ ಸಮಿತಿ ಸದಸ್ಯ ಬಿ. ಚಂದ್ರಪ್ಪ, ಪುರಸಭೆ ನಾಮಿನಿ ಸದಸ್ಯ ಪಿ.ಆರ್. ರಾಜು, ದಿಶಾ ಸಮಿತಿ ಸದಸ್ಯ ಐರಣಿ ಅಣ್ಣಪ್ಪ, ತಾಲ್ಲೂಕು ಬಿಜೆಪಿ ಪ್ರಧಾನ ಕಾರ್ಯದರ್ಶಿ ಆದಾಪುರ ವೀರೇಶ್, ಐರಣಿ ಮಹೇಶಣ್ಣ, ಹೆಚ್.ಡಿ. ಬೀರಪ್ಪ, ಜಿ.ಪಿ. ಹನುಮಗೌಡ ಇನ್ನಿತರರು ಹಾಜರಿದ್ದರು.

# ಕೊರೊನಾ ತಡೆಗೆ ಆಗ್ರಹ, ಆನ್‌ಲೈನ್ ಜನಾಂದೋಲನ



ದಾವಣಗೆರೆ, ಜೂ.3- ಕೋವಿಡ್ 19 ಸಾಂಕ್ರಾಮಿಕ ರೋಗದ ವಿರುದ್ದ ಆರೋಗ್ಯ ವ್ಯವಸ್ಥೆಯನ್ನು ಬಲಪಡಿಸಿ, ಜೀವಗಳನ್ನು ಉಳಿಸಲು ಆಗ್ರಹಿಸಿ ರಾಜ್ಯವ್ಯಾಪಿ ಎಲ್ಲಾ ಎಡ ಪಕ್ಷಗಳಿಂದ ಆನ್‌ಲೈನ್ ಜನಾಂದೋಲನದ ನಡೆಸಲಾಯಿತು.

ರಾಜ್ಯವ್ಯಾಪಿ ಎಡ ಪಕ್ಷಗಳ ಕರೆಯ ಮೇರೆಗೆ ದಾವಣಗೆರೆಯಲ್ಲಿ ಎಸ್‌ಯುಸಿಐ ಕಮ್ಯುನಿಸ್ಟ್ ಪಕ್ಷವು ಆನ್‌ಲೈನ್ ಚಳುವಳಿ ನಡೆಸಿತು.


ದೇಶದಲ್ಲಿ ಕೋವಿಡ್ 2ನೇ ಅಲೆ ಬಗ್ಗೆ ಪಾಶ್ಚಿಮಾತ್ಯ ರಾಷ್ಟ್ರಗಳು ಮುನ್ಸೂಚನೆ ನೀಡಿದ್ದರೂ ಯಾವುದೇ ಕ್ರಮ ಕೇಂದ್ರ ಸರ್ಕಾರ ಕೈಗೊಳ್ಳಲಿಲ್ಲ. ಬದಲಿಗೆ ದ್ವೇಷದ ರಾಜಕೀಯ ಮಾಡುತ್ತಾ ಕಾಲಹರಣ ಮಾಡಿದೆ ಎಂದು ಎಸ್‌ಯುಸಿಐ ಆಕ್ರೋಶ ವ್ಯಕ್ತಪಡಿಸಿದೆ.

ಆಸ್ಪತ್ರೆಗಳು, ಹಾಸಿಗೆ, ಐಸಿಯು, ವೆಂಟಿಲೇಟರ್, ಆಮ್ಲಜನಕ, ಔಷಧಿ, ವೈದ್ಯರು, ದಾದಿಯರು, ವೈದ್ಯಕೀಯ ಸಿಬ್ಬಂದಿಗಳ ತೀವ್ರ ಕೊರತೆ ದೇಶವನ್ನು ಕಾಡುತ್ತಿದೆ. ಲಕ್ಷಾಂತರ ಮಂದಿ ಸಾಯುತ್ತಿದ್ದಾರೆ. ಇದಲ್ಲದೇ 2ನೇ ಅಲೆಯ ಆರ್ಭಟ ನಡೆಯುತ್ತಿರುವಾಗಲೇ 3ನೇ ಅಲೆಯು ಅಪಾಯದ ಕರೆಗಂಟೆ ಹೊಡೆಯಲಾರಂಭಿಸಿದೆ. ಹಾಗಾಗಿ ಇನ್ನು ಹೆಚ್ಚಿನ ವಿನಾಶವನ್ನು ತಡೆಯಲು ಅಗತ್ಯ ಬಿದ್ದರೆ, ಮಿಲಿಟರಿಯನ್ನು ಬಳಸಿಕೊಂಡು ತಕ್ಷಣವೇ ಸಮಾರೋಪಾದಿಯಲ್ಲಿ ವಿವಿಧ ಕ್ರಮಗಳನ್ನು ಜಾರಿಗೆ ತರಬೇಕೆಂದು ಒತ್ತಾಯಿಸಿದೆ.

ನಗರಗಳ ಎಲ್ಲಾ ವಾರ್ಡ್‌ಗಳಲ್ಲಿ, ಪಟ್ಟಣ ಗಳಲ್ಲಿ, ಪಂಚಾಯಿತಿಗಳಲ್ಲಿ ಆಸ್ಪತ್ರೆಗಳನ್ನು ನಿರ್ಮಿಸಿ. ಎಲ್ಲಾ ಆಸ್ಪತ್ರೆಗಳಲ್ಲೂ ಅವಶ್ಯಕ ಸಂಖ್ಯೆಯ ಹಾಸಿಗೆಗಳು, ವೈದ್ಯರು, ದಾದಿಯರು, ವೈದ್ಯಕೀಯ ಸಿಬ್ಬಂದಿಗಳಿರಬೇಕು ಮತ್ತು ಬೇಕಾದಷ್ಟು ಆಮ್ಲಜನಕ, ವೆಂಟಿಲೇಟರ್, ಔಷಧಿಗಳ ಉಚಿತ ಸರಬರಾಜು ಇರಬೇಕು. ಎಲ್ಲಾ ಸೈನಿಕರ ಆಸ್ಪತ್ರೆಗಳನ್ನು ನಾಗರಿಕರ ಚಿಕಿತ್ಸೆಗೆ ತೆರೆದಿಡಿ. ಸಾರ್ವತ್ರಿಕ ಉಚಿತ ಲಸಿಕೆ ನೀಡಿ. ಔಷಧಿ, ಆಮ್ಲಜನಕ ಇತ್ಯಾದಿಗಳ ಕಾಳ ಸಂತೆಯನ್ನು ತಡೆಗಟ್ಟಿ ಎಂದು ಆಗ್ರಹಿಸಿದೆ.

ಈ ಪ್ರತಿಭಟನೆಯಲ್ಲಿ ಜಿಲ್ಲಾ ಕಾರ್ಯದರ್ಶಿ ಮಂಜುನಾಥ್ ಕೈದಾಳೆ, ಮಂಜುನಾಥ್ ಕುಕ್ಕುವಾಡ, ತಿಪ್ಪೇಸ್ವಾಮಿ ಅಣಬೇರು, ಮಧು ತೊಗಲೇರಿ, ಪರಶುರಾಮ್, ಭಾರತಿ, ಪುಷ್ಪಾ, ಸರಸ್ವತಿ, ಪ್ರಕಾಶ್, ಗುರು, ಶಶಿಕುಮಾರ್, ಮಮತ, ಕಾವ್ಯ ಇನ್ನಿತರರು ಪಾಲ್ಗೊಂಡಿದ್ದರು.

# ಧರ್ಮಸ್ಥಳ ಸಂಸ್ಥೆಯ ಆಕ್ಸಿಜನ್ ಉಪಕರಣಗಳ ಕೊಡುಗೆ ಶ್ಲಾಘನೆ



### ಜಗಳೂರು ಶಾಸಕ ರಾಮಚಂದ್ರ

ಜಗಳೂರು, ಜೂ.3- ತಾಲ್ಲೂಕಿನಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯು ಗ್ರಾಮೀಣ ಭಾಗದ ಜನರಿಗೆ ಮತ್ತು ರೈತರಿಗೆ ಆರ್ಥಿಕ ಸಹಾಯ ಮಾಡುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದೆ. ಇಡೀ ರಾಜ್ಯವೇ ಕೊರೊನಾ ವೈರಸ್ ಎದುರಿಸುತ್ತಿರುವ ಸಂದರ್ಭದಲ್ಲಿ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಗೆ 5 ಆಕ್ಸಿಜನ್ ಕಾನ್ಸಂಟ್ರೇಟರ್‌ಗಳನ್ನು ಕೊಡುಗೆಯಾಗಿ ನೀಡಿರುವುದು ಶ್ಲಾಘನೀಯ ಎಂದು ಶಾಸಕ ಎಸ್.ವಿ. ರಾಮಚಂದ್ರ ತಿಳಿಸಿದರು.

ಪಟ್ಟಣದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆ ಆವರಣದಲ್ಲಿ ಪೊಲೀಸ್ ಇಲಾಖೆಯಿಂದ 2 ಮತ್ತು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ವತಿಯಿಂದ ನೀಡಿದ 5 ಆಕ್ಸಿಜನ್ ಕಾನ್ಸಂಟ್ರೇಟರ್‌ಗಳನ್ನು ಸಾರ್ವಜನಿಕ ಆಸ್ಪತ್ರೆಗೆ ಹಸ್ತಾಂತರಿಸಿ ಅವರು ಮಾತನಾಡಿದರು.

ತಾಲ್ಲೂಕಿನಲ್ಲಿ ಪೊಲೀಸ್ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಉತ್ತಮ ಜನಸೇವೆ ಮಾಡುತಿದ್ದಾರೆ. ಕೊರೊನಾ ವೈರಸ್ ಬಗ್ಗೆ ಸಾರ್ವಜನಿಕರು ಜಾಗೃತರಾಗಬೇಕು ಎಂದು ಶಾಸಕರು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಪೊಲೀಸ್ ಇಲಾಖೆ ವೃತ್ತ ನಿರೀಕ್ಷಕ ಮಂಜುನಾಥ ಪಂಡಿತ್, ಪೊಲೀಸ್ ಉಪನಿರೀಕ್ಷಕ ಸಂತೋಷ್ ಬಾಗೋಜಿ, ಶೈಲಶ್ರೀ ಆಸ್ಪತ್ರೆಯ ವೈದ್ಯ ಡಾ. ಮಲ್ಲಪ್ಪ, ಮಕ್ಕಳ ತಜ್ಞ ಜಯಕುಮಾರ್, ಶುಶ್ರೂಷಕರಾದ ಮಾದೇವಮ್ಮ, ಬಿಜೆಪಿ ತಾಲ್ಲೂಕು ಮಂಡಲ ಅಧ್ಯಕ್ಷ ಮಹೇಶ್, ಪಟ್ಟಣ ಪಂಚಾಯ್ತಿ ಅಧ್ಯಕ್ಷ ಆರ್. ತಿಪ್ಪೇಸ್ವಾಮಿ, ಉಪಾಧ್ಯಕ್ಷೆ ಲಲಿತ ಶಿವಣ್ಣ, ಸದಸ್ಯರಾದ ಮಂಜಮ್ಮ, ದೇವರಾಜ್, ಪಾಪಲಿಂಗಪ್ಪ, ರೇವಣ್ಣ, ನವೀನ್ ಇನ್ನಿತರರಿದ್ದರು.

## ಆಮ್ಲಜನಕ ಕಾನ್ಸಂಟ್ರೇಟರ್ ಹಸ್ತಾಂತರ



ದಾವಣಗೆರೆ, ಜೂ.3- ನಗರದ ಕೆಜಿಡಿ ಹಾಲಪ್ಪ ಚಂದ್ರಮೌಳಿ ಸಿ.ಎಂ ರಾಜಶೇಖರ್ ಗೌಡ ಸಿ.ಎಂ ಚಿಗಟೇರಿ ಸರ್ವಮಂಗಳ ಸಿ.ಎಂ ಹಾಗೂ ತಿಪ್ಪೇಸ್ವಾಮಿ ಟಿ. ಈ ಕುಡಿನೀರುಕಟ್ಟೆ ಅವರು 5 ಲೀಟರ್‌ನ 4 ಆಮ್ಲಜನಕ ಕಾನ್ಸಂಟ್ರೇಟರ್ ಗಳನ್ನು ಜಿಲ್ಲಾಡಳಿತಕ್ಕೆ ಹಸ್ತಾಂತರಿಸಿದರು.

## ಮಂಗಳಮುಖಿಯರಿಗೆ ಫುಡ್‌ಕಿಟ್ ವಿತರಿಸಿದ ಎಸ್‌ವಿಆರ್




ಜಗಳೂರು, ಜೂ. 3- ತಾಲ್ಲೂಕಿನಲ್ಲಿ ಸಂಕಷ್ಟದಲ್ಲಿರುವ ಸುಮಾರು ಇಪ್ಪತ್ತಕ್ಕೂ ಹೆಚ್ಚು ಮಂಗಳಮುಖಿಯರಿಗೆ ಶಾಸಕ ಎಸ್.ವಿ. ರಾಮಚಂದ್ರ ಆಹಾರದ ಕಿಟ್ ಹಾಗೂ ನಗದು ಹಣ ನೀಡಿ ಸ್ಪಂದಿಸಿದ್ದಾರೆ.

ತಾಲ್ಲೂಕು ಕಛೇರಿ ಆವರಣದಲ್ಲಿ ಆಹಾರದ ಕಿಟ್ ವಿತರಿಸಿ ಮಾತನಾಡಿದ ಶಾಸಕರು, ಕೊರೊನಾ ಮಹಾಮಾರಿಯಿಂದ ರೈತರು, ಕೂಲಿಕಾರರು, ಬಡ ಜನರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಮಂಗಳಮುಖಿಯರೂ ಸಹ ಕಷ್ಟದಲ್ಲಿದ್ದು, ಅವರಿಗೆ ನನ್ನ ಕೈಲಾದ ನೆರವು ನೀಡಿದ್ದೇನೆ ಎಂದರು. ಈ ಸಂದರ್ಭದಲ್ಲಿ ತಹಶೀಲ್ದಾರ್ ಗಿರೀಶ್ ಬಾಬು, ಸಿಡಿಪಿಓ ಧೀರೇಂದ್ರ ಕುಮಾರ್, ಪ.ಪಂ. ಅಧ್ಯಕ್ಷ ಆರ್. ತಿಪ್ಪೇಸ್ವಾಮಿ, ಬಿಜೆಪಿ ಮಂಡಲ ಅಧ್ಯಕ್ಷ ಹೆಚ್.ಸಿ. ಮಹೇಶ್ ಇನ್ನಿತರರಿದ್ದರು.

## ಕೂಡ್ಲಿಗಿ : ಮನೆ ಮನೆಗೆ ಆಹಾರ ತಲುಪಿಸುವ ಕಾರ್ಯಕ್ಕೆ ಶಾಸಕರ ಚಾಲನೆ



ಕೂಡ್ಲಿಗಿ, ಜೂ.3- ತಾಲ್ಲೂಕಿನ ಬಡಲಡಕು ಜಿಲ್ಲಾ ಪಂಚಾಯ್ತಿ ಸದಸ್ಯರು ಹಾಗೂ ಜಿಲ್ಲಾ ಪಂಚಾಯ್ತಿ ಮಾಜಿ ಅಧ್ಯಕ್ಷರಾದ ದಿನಾ ಮಂಜುನಾಥ್ ಅವರು ತಮ್ಮ ಜಿ.ಪಂ. ವ್ಯಾಪ್ತಿಯಲ್ಲಿ ಬರುವ ಹಳ್ಳಿಗಳಿಗೆ ನಿರಂತರ ಒಂದು ವಾರ ಆಹಾರವನ್ನು ಮನೆ ಮನೆಗೆ ತಲುಪಿಸುವ ಕಾರ್ಯಕ್ರಮಕ್ಕೆ ಕೂಡ್ಲಿಗಿಯ ಶಾಸಕ ಎನ್.ವೈ. ಗೋಪಾಲಕೃಷ್ಣ ಮತ್ತು ಬಿಜೆಪಿ ಜಿಲ್ಲಾಧ್ಯಕ್ಷ ಚನ್ನಬಸವನಗೌಡ ಪಾಟೀಲ್ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಹಿರಿಯ ಮುಖಂಡರಾದ ತಿಪ್ಪೇಸ್ವಾಮಿ, ವೀರನ ಗೌಡ್ರು , ಮಲ್ಲಿಕಾರ್ಜುನ ಗೌಡರು ಮತ್ತು ಶಾಸಕರ ಆಪ್ತ ಸಹಾಯಕ ಶ್ರೀಕಾಂತ್ ಹಾಗೂ ದಿನಾ ಮಂಜುನಾಥ ಅವರ ಅಭಿಮಾನಿ ಬಳಗದವರು ಭಾಗವಹಿಸಿದ್ದರು.

# ರಫ್ತು ಉದ್ಯಮಗಳಿಗೆ ವಿನಾಯಿತಿ

**(1ನೇ ಪುಟದಿಂದ)** ಒಂದು ವಾರದ ಪರಿಸ್ಥಿತಿ ಅವಲೋಕನ ಮಾಡಲಿರುವ ರಾಜ್ಯ ಸರ್ಕಾರ ಬಳಿಕ ಕೆಲವೊಂದು ರಿಯಾಯಿತಿಗಳನ್ನು ಘೋಷಣೆ ಮಾಡುವ ಸಾಧ್ಯತೆ ಇದೆ. ಜತೆಗೆ ಕ್ರೇನ್, ಬುಲ್ಡೋಜರ್, ಜನರೇಟರ್, ರೋಲರ್ ಸೇರಿದಂತೆ ಬೃಹತ್ ಯಂತ್ರಗಳ ರಿಪೇರಿ ವರ್ಕ್ ಶಾಪ್ ಕಾರ್ಯಾರಂಭಕ್ಕೆ ಷರತ್ತುಬದ್ಧ ಅನುಮತಿ ವಿಧಿಸುವ ಆಲೋಚನೆ ಇದೆ.

ಅಲ್ಲದೇ, ಕನ್ನಡ ಧಾರಾವಾಹಿಗಳ ಚಿತ್ರೀಕರಣಕ್ಕೆ ಸ್ಟುಡಿಯೋಗಳಲ್ಲಿ ಷರತ್ತು ಬದ್ಧ ಅನುಮತಿ ಸಾಧ್ಯತೆಯಿದ್ದು, ಬ್ಯೂಟಿ ಪಾರ್ಲರ್, ಸೆಲೂನ್‌ಗಳಿಗೂ ಷರತ್ತು ಬದ್ಧ ಅವಕಾಶ ನೀಡಬಹುದು ಎಂಬ ಮಾತುಗಳು ಕೇಳಿಬರುತ್ತಿವೆ. ಅಗತ್ಯ ವಸ್ತುಗಳ ಖರೀದಿ ವೇಳೆಯಲ್ಲಿ ಸಂಜೆಯವರೆಗೆ ಅವಕಾಶ ಕಲ್ಪಿಸುವುದು, ಗಾರ್ಮೆಂಟ್ಸ್ ಫ್ಯಾಕ್ಟರಿಗಳಿಗೆ ಶೇ.50 ರಷ್ಟು ಸಿಬ್ಬಂದಿಯೊಂದಿಗೆ ಕಾರ್ಯ ನಿರ್ವಹಣೆಗೆ ಅವಕಾಶ ನೀಡುವುದು, ಹೊಲಗಳಿಗೆ ಹೋಗಿ ನೇರವಾಗಿ ರೈತರಿಂದಲೇ ಉತ್ಪನ್ನ ಖರೀದಿಗೆ ಅವಕಾಶ ನೀಡುವುದು ಸೇರಿದಂತೆ ಒಂದಷ್ಟು ವಿನಾಯಿತಿ ಘೋಷಿಸುವ ನಿರೀಕ್ಷೆ ಇದೆ.

# ಎಸ್ಸೆಸ್-ಎಸ್ಸೆಸ್ಸೆಂ ಸ್ವಂತ ಖರ್ಚಿನಿಂದ ನಗರದಲ್ಲಿ ಲಸಿಕೆ

**(1ನೇ ಪುಟದಿಂದ)** ತಗಲುವ ವೆಚ್ಚದ ಅರ್ಧ ಹಣವನ್ನು ಭರಿಸುವುದಾಗಿ ಹೇಳಿದ್ದೆ. ಇದುವರೆವರೆಗೂ ಈ ವಿಚಾರವಾಗಿ ಸರ್ಕಾರದಿಂದ ಯಾವುದೇ ಉತ್ತರ ಬಾರದ ಹಿನ್ನಲೆಯಲ್ಲಿ ನಾನು ಈ ಹಿಂದೆ ಘೋಷಣೆ ಮಾಡಿದಂತೆ ಕ್ಷೇತ್ರದ ಜನರಿಗೆ ಲಸಿಕೆ ನೀಡಲು ಮುಂದಾಗಿದ್ದೇನೆ ಎಂದು ತಿಳಿಸಿದರು.

ನಾನು ಮಾಡಿದ್ದ ವಾಗ್ದಾನದ ಬಗ್ಗೆ ಟೀಕೆಗಳು ವ್ಯಕ್ತವಾಗಿದ್ದವು. ಆದರೂ ಇದನ್ನೆಲ್ಲಾ ಬದಿಗೊತ್ತಿ ಕೊಟ್ಟ ಮಾತಿನಂತೆ ಜನರು ಕೊರೊನಾದಿಂದ ಸಂಕಷ್ಟ ಅನುಭವಿಸಬಾರದು ಎಂದು ಲಸಿಕೆ ಆಯೋಜನೆ ಮಾಡಿದ್ದು, ಮೊದಲ ಹಂತದಲ್ಲಿ 10 ಸಾವಿರ ಡೋಸ್ ಲಸಿಕೆ ಹಾಕಲಾಗುವುದು. ನಾಳೆ ದಿನಾಂಕ 4ರ ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ನಗರದೇವತೆ ದುರ್ಗಾಂಬಿಕಾ ದೇವಾಲಯದ ಮುಂಭಾಗದಲ್ಲಿರುವ ದಾಸೋಹ ಮಂದಿರದಲ್ಲಿ ಲಸಿಕೆಗೆ ಚಾಲನೆ ನೀಡಲಾಗುವುದು ಎಂದು ಹೇಳಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ವಿಧಾನ ಪರಿಷತ್ ಸದಸ್ಯರಾದ ಯು.ಬಿ. ವೆಂಕಟೇಶ್, ಕೆ.ಸಿ. ಕೊಂಡಯ್ಯ ಮತ್ತಿತರರು ಭಾಗವಹಿಸಲಿದ್ದಾರೆ. ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರಿಗೆ ಆರೋಗ್ಯ ಸರಿ ಇಲ್ಲದ ಕಾರಣ ಬರುತ್ತಿಲ್ಲ ಎಂದರು.

**ಸರ್ಕಾರ ಮಾಡಬೇಕಿದ್ದನ್ನು ಮಾಡಿದ್ದೇವೆ:** ಆರಂಭದಲ್ಲಿ ಖಾಸಗಿಯಾಗಿ ಲಸಿಕೆ ಕೊಡುತ್ತಿರಲಿಲ್ಲ. ಆದರೆ ನಾವು ಮನವೊಲಿಸಿ ಲಸಿಕೆ ಪಡೆದಿದ್ದೇವೆ. ಆಡಳಿತ ಪಕ್ಷ ಮಾಡಬೇಕಾದ ಕೆಲಸವನ್ನು ನಾವು ಮಾಡಿದ್ದೇವೆ ಆ ಮುಖೇನ ಕೊಟ್ಟ ಮಾತನ್ನು ಉಳಿಸಿಕೊಂಡಿದ್ದೇವೆ.

ಎಲ್ಲರಿಗೂ ಉಚಿತವಾಗಿ ಲಸಿಕೆ ನೀಡಲು ಬಹಳವೆಂದರೆ ಮೂರುವರೆ ಸಾವಿರ ಕೋಟಿ ರೂ ಖರ್ಚಾಗಬಹುದು. ಯಾವುದಾದರೂ ಯೋಜನೆಯ ಹಣವನ್ನು ಇದಕ್ಕೆ ಉಪಯೋಗಿಸಬಹುದಿತ್ತು ಎಂದರು.

ಬಿಜೆಪಿ, ಕಾಂಗ್ರೆಸ್ ಪಕ್ಷ ಎನ್ನದೇ ಪಕ್ಷಾತೀತವಾಗಿ ಎಲ್ಲ ಜನರಿಗೂ ಲಸಿಕೆ ನೀಡಲಾಗುವುದು. ಇಂತಹ ಪ್ರಯೋಗ ರಾಜ್ಯದಲ್ಲಿ ಅಲ್ಲ, ದೇಶದಲ್ಲೇ ಮೊಟ್ಟ ಮೊದಲ ಪ್ರಯೋಗ ಆಗಿದೆ ಎಂದು ಮಲ್ಲಿಕಾರ್ಜುನ್ ತಿಳಿಸಿದರು.

ಮೊದಲಿಗೆ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಐದು ವಾರ್ಡ್‌ಗಳು ಸೇರಿ ಒಂದು ಲಸಿಕಾ ಕೇಂದ್ರದಲ್ಲಿ ಲಸಿಕೆ ಹಾಕಲಾಗುವುದು. 2-3 ದಿನಗಳಲ್ಲಿ ಅಲ್ಲಿಯೂ ಉತ್ತರ ವಿಧಾನಸಭಾ ಕ್ಷೇತ್ರಕ್ಕೂ ಲಸಿಕೆ ನೀಡಲಾಗುವುದು. ಬೂತ್ ಮತ್ತು ವಾರ್ಡ್‌ವಾರು ಲಸಿಕೆ ಹಾಕಲಾಗುವುದು ಎಂದರು.

ನಮ್ಮ ವೈದ್ಯಕೀಯ ಕಾಲೇಜುಗಳಲ್ಲಿರುವ ವೈದ್ಯರು, ನರ್ಸ್‌ಗಳು ಮತ್ತು ಸ್ವಯಂ ಸೇವಕರ ತಂಡವೇ ಲಸಿಕೆ ನೀಡುವ ಕಾರ್ಯದಲ್ಲಿ ಭಾಗವಹಿಸಲಿದೆ. ಸರ್ಕಾರದಿಂದ ಈಗಾಗಲೇ ನೀಡಲಾಗುತ್ತಿರುವ ಲಸಿಕೆಯನ್ನು ಹಾಕಿಸಿಕೊಂಡವರ, ಹಾಕಿಸಿಕೊಳ್ಳಬೇಕಾದವರ ಬಗ್ಗೆ ಮಾಹಿತಿ ಕಲೆಹಾಕಲಾಗಿದೆ. ಲಸಿಕೆ ಪಡೆಯದವರನ್ನು ಗುರುತಿಸಿ ನೀಡಲಾಗುತ್ತದೆ. ಸರ್ಕಾರದ ಆ್ಯಪ್ ಬಳಸಿಕೊಳ್ಳಲಾಗುವುದು. ಜಿಲ್ಲಾಡಳಿತ, ಆರೋಗ್ಯ ಇಲಾಖೆಯೊಂದಿಗೆ ಚರ್ಚೆ ನಡೆಸಿದ್ದೇವೆ ಎಂದು ವಿವರಿಸಿದರು.

**ಶೀಘ್ರವೇ ಹಣ ನೀಡಿದವರಿಗೂ ಲಸಿಕೆ:** ಈಗಾಗಲೇ ನಾವುಗಳು ಹಣ ಕೊಡುತ್ತೇವೆ. ನಮಗೆ ಲಸಿಕೆ ಕೊಡಿ ಎಂದು ಹಣ ಇದ್ದವರು ಮನವಿ ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ಎಸ್.ಎಸ್. ಹೈಟೆಕ್ ಆಸ್ಪತ್ರೆ, ಬಾಪೂಜಿ ಆಸ್ಪತ್ರೆಯಲ್ಲಿ ಲಸಿಕೆ ಕೊಡಲಾಗುವುದು. ಅದು ಯಾವಾಗ ಪ್ರಾರಂಭ ಮಾಡುತ್ತೇವೆ ಎನ್ನುವುದು ಇನ್ನೂ ನಿರ್ಧಾರವಾಗಿಲ್ಲ. ಆದರೆ, ಸದ್ಯದಲ್ಲೇ ಲಸಿಕೆ ನೀಡುತ್ತೇವೆ ಎಂದು ಮಲ್ಲಿಕಾರ್ಜುನ್ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಗೋಷ್ಠಿಯಲ್ಲಿ ಕೆಪಿಸಿಸಿ ವಕ್ತಾರ ಡಿ. ಬಸವರಾಜ್, ಪಾಲಿಕೆ ವಿರೋಧ ಪಕ್ಷದ ನಾಯಕ ಎ. ನಾಗರಾಜ್, ಕಾಂಗ್ರೆಸ್ ಪಕ್ಷದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ, ಜಿಲ್ಲಾ ಪಂಚಾಯತ್ ಸದಸ್ಯ ಕೆ.ಎಸ್. ಬಸವಂತಪ್ಪ, ಪಾಲಿಕೆ ಸದಸ್ಯ ಚಮನ್ ಸಾಬ್, ದಕ್ಷಿಣ ಕಾಂಗ್ರೆಸ್ ಅಧ್ಯಕ್ಷ ಅಯೂಬ್ ಪೈಲ್ವಾನ್, ಮುಖಂಡ ಮಾಲತೇಶ್ ರಾವ್ ಜಾಧವ್, ಕುರುಡಿ ಗಿರೀಶ್, ಹರೀಶ್ ಬಸಾಪುರ ಸೇರಿದಂತೆ ಇತರರು ಇದ್ದರು.

## ಕಾನ್ಸ್‌ಟೇಬಲ್ ಹುದ್ದೆಗೆ ಅರ್ಜಿ

ದಾವಣಗೆರೆ, ಜೂ.3- ಪೊಲೀಸ್ ಇಲಾಖೆಯಲ್ಲಿ ಖಾಲಿ ಇರುವ ಪೊಲೀಸ್ ಕಾನ್ಸ್‌ಟೇಬಲ್ (ನಾಗರಿಕ) (ಪುರುಷ ಮತ್ತು ಮಹಿಳಾ) (ಮಿಕ್ಕುಳಿದ) ಮತ್ತು ಕಲ್ಯಾಣ ಕರ್ನಾಟಕ ಪ್ರದೇಶದ (ಸ್ಥಳೀಯ) ಹುದ್ದೆಗಳನ್ನು ಒಳಗೊಂಡಂತೆ 3533 ಖಾಲಿ ಹುದ್ದೆಗಳ ನೇಮಕಾತಿ ಸಲುವಾಗಿ ಅಧಿಸೂಚನೆಯನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ಮೇ 21 ರಂದು ಪ್ರಕಟಿಸಿ ನೇಮಕಾತಿ ಪ್ರಕ್ರಿಯೆಯನ್ನು ಕೈಗೊಳ್ಳಲಾಗಿದೆ.

ಈ ಅಧಿಸೂಚನೆಯನ್ವಯ ಅರ್ಹ ಅಭ್ಯರ್ಥಿಗಳಿಂದ ಇಂದಿನಿಂದ ಜೂನ್ 25 ರವರೆಗೆ ಅರ್ಜಿಯನ್ನು ಆಹ್ವಾನಿಸಲಾಗಿದ್ದು, ಅಭ್ಯರ್ಥಿಗಳು ವಯೋಮಿತಿ, ವಿದ್ಯಾರ್ಹತೆ ಮತ್ತು ಇನ್ನಿತರೆ ಸಂಪೂರ್ಣ ಮಾಹಿತಿಗಾಗಿ ಪೊಲೀಸ್ ಇಲಾಖೆಯ ಅಧಿಕೃತ ವೆಬ್‌ಸೈಟ್ http://recruitment.ksp.gov.in ನ್ನು ವೀಕ್ಷಿಸಿ ಅರ್ಜಿ ಸಲ್ಲಿಸಬಹುದೆಂದು ಪೊಲೀಸ್ ಅಧೀಕ್ಷಕ ಹನುಮಂತರಾಯ ತಿಳಿಸಿದ್ದಾರೆ.

## ಕೊಳಕು ಭಾಷೆ ಎಂದ ಗೂಗಲ್

**(1ನೇ ಪುಟದಿಂದ)** ಇದು ಪರಿಪೂರ್ಣವಲ್ಲ. ಆದರೆ, ನಾವು ವಿಷಯ ಗಮನಕ್ಕೆ ಬಂದ ತಕ್ಷಣ ಕ್ರಮ ತೆಗೆದುಕೊಂಡಿದ್ದೇವೆ.

ನಿರಂತರವಾಗಿ ನಮ್ಮ ಶೋಧ ವಿಧಾನ ಸುಧಾರಣೆ ಮಾಡುತ್ತೇವೆ. ಶೋಧದ ಫಲಿತಾಂಶ ಗೂಗಲ್ ನಿಲುವನ್ನು ತಿಳಿಸುವುದಿಲ್ಲ. ಇದರಿಂದ ಉಂಟಾಗಿರುವ ತಪ್ಪು ಕಲ್ಪನೆ ಹಾಗೂ ಭಾವನೆಗಳಿಗೆ ನೋವಾಗಿರುವುದಕ್ಕೆ ವಿಷಾದಿಸುವುದಾಗಿ ಹೇಳಿದ್ದಾರೆ.

ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಸರಣಿ ಟ್ವೀಟ್ ಮೂಲಕ ಗೂಗಲ್ ಬೇಜವಾಬ್ದಾರಿ ವರ್ತನೆ ಬಗ್ಗೆ ಆಕ್ಷೇಪಿಸಿದ್ದಾರೆ.

## ರಾಜ್ಯದಲ್ಲಿ ಸೋಂಕು ಏರಿಕೆ

**(1ನೇ ಪುಟದಿಂದ)** ಕೊರೊನಾ ಪರೀಕ್ಷೆಗೆ ಒಳಪಡಿಸಲಾಗಿದೆ.

ರಾಜ್ಯದಲ್ಲಿ ಸಕ್ರಿಯ ಸೋಂಕಿತರ ಸಂಖ್ಯೆ ಈಗ 2.86 ಲಕ್ಷದಷ್ಟಿದೆ. ಕೊರೊನಾ ಟೆಸ್ಟ್‌ಗಳಲ್ಲಿ ಪಾಸಿಟಿವ್ ಬರುವ ದರ ಶೇ.12.20ರಷ್ಟಿದೆ.

## ಅಂಗನವಾಡಿ-ಆಶಾ ಕಾರ್ಯಕರ್ತೆಯರಿಗೆ ಹಬೆ ಯಂತ್ರ



ದಾವಣಗೆರೆ, ಜೂ.3- ಸೇವಾ ಭಾರತಿ ವತಿಯಿಂದ ಶುಕ್ರವಾರ ನಗರದ ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರದಲ್ಲಿ ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತೆಯರಿಗೆ ಹಬೆ ಯಂತ್ರಗಳನ್ನು ವಿತರಿಸಲಾಯಿತು.

ಕೊರೊನಾ ವಾರಿಯರ್ಸ್ ಆರೋಗ್ಯ ರಕ್ಷಣೆಗಾಗಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸಹಕಾರದೊಂದಿಗೆ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಇದಲ್ಲದೆ, ಸೇವಾ ಭಾರತಿಯು ಸತ್ಯ ಸಾಯಿ ಸಂಸ್ಥೆ ಸಹಕಾರದಲ್ಲಿ ಕಳೆದ 20 ದಿನಗಳಿಂದಲೂ ಕೋವಿಡ್ ರೋಗಿಗಳಿಗೆ ಉಚಿತ ಆಂಬ್ಯುಲೆನ್ಸ್ ಮತ್ತು ಸಹಾಯವಾಣಿ ಸೇವೆ ಒದಗಿಸುತ್ತಿದೆ.

ಕಾರ್ಯಕ್ರಮದಲ್ಲಿ ನಗರ ಪಾಲಿಕೆ ಸದಸ್ಯ ಆರ್.ಎಲ್. ಶಿವಪ್ರಕಾಶ್, ಸೇವಾ ಭಾರತಿ ಕಾರ್ಯದರ್ಶಿ ರಮೇಶ್, ಗಿರೀಶ್, ಅರುಣ ಗುಡ್ಡದಕೇರಿ, ರಾಷ್ಟ್ರೋತ್ಥಾನ ವಿದ್ಯಾಲಯದ ಜಯಣ್ಣ, ಸಿದ್ಧಲಿಂಗಸ್ವಾಮಿ ಇದ್ದರು.

## ಶಿಕ್ಷಕ ಎಂ.ಎಸ್.ಅಗಡಿಗೆ ಬೀಳ್ಕೊಡುಗೆ



ದಾವಣಗೆರೆ, ಜೂ.3- ನಗರದ ಮಹಾತ್ಮ ಗಾಂಧಿ ಪ್ರೌಢಶಾಲೆಯಲ್ಲಿ ಚಿತ್ರಕಲಾ ಶಿಕ್ಷಕರಾಗಿ 41 ವರ್ಷಗಳ ಕಾಲ ಸೇವೆ ಸಲ್ಲಿಸಿ, ನಿವೃತ್ತಿ ಹೊಂದಿರುವ ಎಂ.ಎಸ್.ಅಗಡಿ ಅವರಿಗೆ ಶಾಲಾ ಆಡಳಿತ ಮಂಡಳಿಯಿಂದ ಸನ್ಮಾನಿಸಿ, ಬೀಳ್ಕೊಡಲಾಯಿತು.

ಈ ಸಂದರ್ಭದಲ್ಲಿ ಆದಿ ಕರ್ನಾಟಕ ವಿದ್ಯಾಭಿವೃದ್ಧಿ ಸಂಸ್ಥೆ ಅಧ್ಯಕ್ಷ ಎಲ್. ಎಂ.ಹನುಮಂತಪ್ಪ, ಶಿಕ್ಷಕರಾದ ಎಸ್.ಜಯದೇವಪ್ಪ, ಸುರೇಶ್ ಜೈನ್, ಬಿ. ಎನ್.ಹೈ ಬತ್ತಿ, ಶಿಕ್ಷಕರದ ಟಿ.ತಿಪ್ಪೇರುದ್ರಯ್ಯ, ಎನ್.ಎಸ್.ಆನಂದಯ್ಯ, ಎನ್. ದಿನೇಶ್, ಅಂಜಿನಪ್ಪ, ಪ್ರೌಢಶಾಲೆ ಮುಖ್ಯೋಪಾಧ್ಯಾಯ ಜಿ.ಬಿ. ಪರಮೇಶ್ವರಪ್ಪ, ಕಾಲೇಜಿನ ಉಪನ್ಯಾಸಕ ನಿಂಗಪ್ಪ, ತಾ. ಅಕ್ಷರ ದಾಸೋಹ ಅಧಿಕಾರಿ ಕೆ.ಜಿ.ಶಿವಶಂಕರ್, ಪೋಷಕರು, ವಿದ್ಯಾರ್ಥಿಗಳು ಇದ್ದರು.


**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

**ಜಮೀನು ಬೇಕಾಗಿದೆ**
ದಾವಣಗೆರೆ ಸುತ್ತ ಮುತ್ತಲಿನ ಸುತ್ತಳತೆ 10-12 ಕಿ.ಮೀ. ಒಳಗಿರುವ ರಸ್ತೆ ಸಂಪರ್ಕವಿರುವ ಕನಿಷ್ಟ 10 ಎಕರೆ ಬೆದ್ದಲು ಜಮೀನು ಖರೀದಿಗೆ ಬೇಕಾಗಿದೆ.
98866 45880

ಜೈ ಶ್ರೀಮನ್ನಾರಾಯಣ
ವಿಕಾಸ ತರಂಗಿಣಿ, ದಾವಣಗೆರೆ
ಸ್ಫೂರ್ತಿ ಸೇವಾ ಟ್ರಸ್ಟ್
**ಪ್ರಸಾದ ದಾಸೋಹ**
ಇಂದಿನ ಪ್ರಸಾದ ವಿತರಕರು
ದಿ.ಚಂದ್ರಶೇಖರ್ ಶೇಟ್ ಇವರ ಜ್ಞಾಪಕಾರ್ಥವಾಗಿ ಪತ್ನಿ ಜಯಶ್ರೀ ಶೇಟ್ ಮತ್ತು ಕುಟುಂಬ ವರ್ಗದವರ ಸೇವಾರ್ಥ
ಸ್ಥಳ : ಸಿ.ಜಿ. ಆಸ್ಪತ್ರೆ ಮುಂಭಾಗ, 12 ಗಂಟೆಗೆ ಮತ್ತು ಹೆರಿಗೆ ಆಸ್ಪತ್ರೆ ಮುಂಭಾಗ, 12.30ಕ್ಕೆ

ಅನ್ನವೇ ದೇವರು
**ಕರುಣಾ ಜೀವ ಕಲ್ಯಾಣ ಟ್ರಸ್ಟ್**
ಇಂದಿನ ಅನ್ನದಾಸೋಹ ದಾಸೋಹಿಗಳು
**ಹೆಚ್.ಡಿ. ಮಂಜುನಾಥ್**
ಸಿದ್ಧವೀರಪ್ಪ ಬಡಾವಣೆ
ಧನ ಸಹಾಯ ಮಾಡುವವರು ಸಂಪರ್ಕಿಸಿ
91104 55199

**ಮನೆ ಬಾಡಿಗೆಗೆ ಇದೆ**
ಮೊದಲನೆ ಮಹಡಿ, ಅಟ್ಯಾಚ್ಡ್ ಬಾತ್ ರೂಂ ನಿಜಲಿಂಗಪ್ಪ ಬಡಾವಣೆಯಲ್ಲಿ 2 BHK ಮನೆ ಹಾಗೂ ಅಟ್ಯಾಚ್ಡ್ ಬಾತ್ ರೂಂ ಇರುವ ಸಿಂಗಲ್ ರೂಂ ಬಾಡಿಗೆಗೆ ಇದೆ.
99867 78748
ಸಸ್ಯಹಾರಿಗಳಿಗೆ ಮಾತ್ರ

**ರೂಂ ಬಾಡಿಗೆಗೆ ಇದೆ**
ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್ (ಹೊಸ ಕೋರ್ಟ್ ಹಿಂಭಾಗ) 5ನೇ ಕ್ರಾಸ್‌ನಲ್ಲಿ ಎಲ್ಲ ಸೌಕರ್ಯವುಳ್ಳ ರೂಂ ಬಾಡಿಗೆಗೆ ಇದೆ. ಸಂಪರ್ಕಿಸಿ
97310 63330

**ಪ್ರತಿಷ್ಠಿತ CBSE ಶಾಲೆಗೆ ಅನುಭವಿ ಶಿಕ್ಷಕರು ಬೇಕಾಗಿದ್ದಾರೆ**
Primary Maths - 01
Primary Science - 01
Primary Hindi - 02
ಸಂಪರ್ಕಿಸಿ : 9844443223, 7378392875, 9538688975

**Online Word Problems**
From 3rd Std to 6th std
**Bruit Abacus and Vedic Maths**
97390 66956
*Stay Home Stay safe*

**ನಿಮ್ಮ ಮನೆಯಲ್ಲಿ ನೀರು ಸೋರುತ್ತಿದೆಯೇ ?**
ನಿಮ್ಮ ಮನೆಯಲ್ಲಿ ಸೀಲಿಂಗ್, ಬಾತ್ ರೂಂ, ಟ್ಯಾಂಕ್ ಮತ್ತು ಹೊರಗಡೆ ಗೋಡೆ ಸೀಳಿರುವುದಕ್ಕೆ ಮತ್ತು ಯಾವುದೇ ರೀತಿಯ ನೀರಿನ ಲೀಕೇಜ್‌ಗೆ ಕಡಿಮೆ ಖರ್ಚಿನಲ್ಲಿ ಪರ್ಮನೆಂಟ್ ಆಗಿ ಸರಿ ಮಾಡಿಕೊಡಲಾಗು ವುದು. ಗ್ಯಾರಂಟಿ ಇರುತ್ತದೆ. ನಿರಂತರವಾಗಿ 15 ವರ್ಷಗಳಿಂದ ಸೇವೆ.
ವಿಶ್ವಾಸಿ ಎಂಟರ್‌ಪ್ರೈಸಸ್ - 96065 57066

**ಸ್ಟಾರ್ ಸ್ಪೋರ್ಟ್ಸ್ ದಾವಣಗೆರೆ.**
ಎಲ್ಲಾ ತರಹದ ಕ್ರೀಡಾ ಸಾಮಗ್ರಿಗಳನ್ನು ಮನೆಗೆ ತಲುಪಿಸುವ ವ್ಯವಸ್ಥೆ ಇದೆ. ಕೇರಂ, ಚೆಸ್, ಲುಡೋ, ಯೋಗ ಮ್ಯಾಟ್, ಯೋಗ ಬ್ರಿಕ್, ಜಿಮ್ ಬಾಲ್, ಶಟಲ್ ರ್ಯಾಕೆಟ್, ಕಾಕ್, ಮಾವೀಸ್-350, ಕ್ರಿಕೆಟ್ ಬ್ಯಾಟ್, ಬಾಲ್, ಡಂಬಲ್ಸ್ ಟಿ.ಟಿ. ಬ್ಯಾಟ್, ಇತರೆ.
8310154195, 8310469873

**ಭವಿಷ್ಯ Astrologer**
ಮೋಡಿ ಮಾಂತ್ರಿಕ ಗಿಡ್ಡಪ್ಪ
ಶ್ರೀ ಚೌಡೇಶ್ವರಿ ಭೂತರಾಯ ಆರಾಧಕರು. 48 ಗಂಟೆಯಲ್ಲಿ ಪರಿಹಾರ. ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ವ್ಯಾಪಾರದಲ್ಲಿ ಲಾಭ-ನಷ್ಟ,ಮಾಟ-ಮಂತ್ರ, ಆರೋಗ್ಯ , ಲೈಂಗಿಕ. ಸಮಸ್ಯೆ, ಸಾಲಬಾಧೆ, ಮನ:ಪ್ರೇತಬಾಧೆ,ವಶೀಕರಣ, ಅಂಗುಷ್ಟ ವಶೀಕರಣ, ಇಷ್ಟಪಟ್ಟವರು ನಿಮ್ಮಂತೆ ಆಗಲು ನಮ್ಮಲ್ಲಿ ಶಾಶ್ವತ ಪರಿಹಾರ. ಇಂದೇ ಕರೆ ಮಾಡಿ
99807 70791

**Wanted Teachers**
Qualification :
1) B.A. B.Ed - English - 02
2) B.Sc., B.Ed - PCM - 02 CBZ - 03
3) B.A., B.Ed - Hindi - 02
4) B.A. B.Ed - Social - 02
SJM English Medium Public School
80734 81049, 90197 38735


## ಭಾವಸಾರ ಕ್ಷತ್ರಿಯ ಸಮಾಜದಿಂದ ಆಹಾರ ಧಾನ್ಯದ ಕಿಟ್ ವಿತರಣೆ

ದಾವಣಗೆರೆ, ಜೂ.3- ನಗರದ ಬಾಂಬೆ ಸೆಲೆಕ್ಷನ್ ಮಾಲೀಕರೂ, ಭಾವಸಾರ ಕ್ಷತ್ರಿಯ ಸೊಸೈಟಿಯ ಹಾಗೂ ದೈವ ಮಂಡಳಿ ಮಾಜಿ ಅಧ್ಯಕ್ಷರೂ ಆಗಿದ್ದ ಗಣೇಶ್‌ರಾವ್ ಪುಟಾಣ್‌ಕರ್ ಅವರ ಪುಣ್ಯ ಸ್ಮರಣಾರ್ಥವಾಗಿ ಶ್ರೀ ಭಾವಸಾರ ಕ್ಷತ್ರಿಯ ತರುಣ ಮಂಡಳ ಇವರ ಸಹಯೋಗದಿಂದ ಸಮಾಜದ ಬಡ ಕುಟುಂಬಕ್ಕೆ ಮನೆ ಮನೆಗೆ ತೆರಳಿ ರೇಷನ್ ಕಿಟ್‌ಗಳನ್ನು ವಿತರಿಸಲಾಯಿತು.


ತರುಣ ಮಂಡಳದ ಗೌರವ ಅಧ್ಯಕ್ಷ ಚಂದ್ರಕಾಂತ್ ವಾದೋಣಿ, ಅಧ್ಯಕ್ಷ ವಿಜಯಕುಮಾರ್ ವಾದೋಣಿ, ಉಪಾಧ್ಯಕ್ಷ ಮಾಲತೇಶ್ ಗುಜ್ಜರ್, ಸಮಾಜದ ಮುಖಂಡರುಗಳಾದ ಅರವಿಂದ ಗೊಂದಕರ್, ಮಂಜುನಾಥ್ ಪುಟಾಣ್‌ಕರ್, ಹಾಗೂ ಇತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಜನನಿಯಿಂದ ಕಲಾವಿದರಿಗೆ ರೇಷನ್ ಕಿಟ್ ವಿತರಣೆ



ದಾವಣಗೆರೆ, ಜೂ. 3- ಜನನಿ ಫೌಂಡೇಷನ್‌ನ 4ನೇ ವಾರ್ಷಿಕೋತ್ಸವ ನಿಮಿತ್ತ ಹಾಗೂ ಫೌಂಡೇಷನ್ ಅಧ್ಯಕ್ಷ ಶಿವಪ್ರಸಾದ್ ಕುರುಡಿಮಠ್ ಅವರ ನೆನಪಿಗಾಗಿ ಕೋವಿಡ್ ಸಂಕಷ್ಟದಲ್ಲಿರುವ ನಾಟಕ ಮತ್ತು ಆರ್ಕೆಸ್ಟ್ರಾ ಕಲಾವಿದರ ಕುಟುಂಬಗಳಿಗೆ ರೇಷನ್ ಕಿಟ್‌ಗಳನ್ನು ವಿತರಿಸಲಾಯಿತು.ಫೌಂಡೇಷನ್ ಮೂಲಕ ಸೇವೆ ಸಲ್ಲಿಸಲಿಚ್ಛಿಸುವವರು ಸಂಪರ್ಕಿಸಿ 9148316373, 8970359590.

# ಹರಪನಹಳ್ಳಿಯಲ್ಲಿ ಶೀಘ್ರ ಪೊಲೀಸ್ ಠಾಣೆ ಕಟ್ಟಡ ಕಾಮಗಾರಿಗೆ ಚಾಲನೆ



ಹರಪನಹಳ್ಳಿ, ಜೂ.3- ಶೀಘ್ರದಲ್ಲೆ ಪಟ್ಟಣದ ಹಳೇ ಪೊಲೀಸ್ ಠಾಣೆ ಇದ್ದ ಸ್ಥಳದಲ್ಲೇ ನೂತನ ಪೊಲೀಸ್ ಠಾಣೆ ನಿರ್ಮಾಣಗೊಳ್ಳುವ ಮುನ್ಸೂಚನೆ ಸಿಕ್ಕಿದ್ದು, ಮೊದಲ ಹಂತವಾಗಿ ಇಂದು ಕಟ್ಟಡ ನಿರ್ಮಾಣಕ್ಕಾಗಿ ಅಳತೆ ಕಾರ್ಯ ನಡೆದಿದೆ.

ನೂರು ವರ್ಷದ ಭವ್ಯ ಇತಿಹಾಸವಿದ್ದು, ಕಟ್ಟಡವು ಶಿಥಿಲಗೊಂಡ ಹಿನ್ನೆಲೆಯಲ್ಲಿ ಪ್ರಸ್ತುತ ಠಾಣೆಯು ಕಳೆದ ಮೂರು ವರ್ಷಗಳಿಂದ ಹಳೇ ಕಂದಾಯ ಕಛೇರಿಯಲ್ಲಿ ಕಾರ್ಯನಿರ್ವಹಿಸು ತ್ತಿದೆ. ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಗಮದಿಂದ ಅನುದಾನ ಬಿಡುಗಡೆಯಾಗಿದ್ದು, ಸುಸಜ್ಜಿತ ಕಟ್ಟಡ ನಿರ್ಮಾಣಕ್ಕೆ ಗುರುವಾರ ಅಳತೆ ಕಾರ್ಯವನ್ನು ಕೈಗೊಳ್ಳಲಾಗಿತ್ತು.

ಈ ಸಂದರ್ಭದಲ್ಲಿ ಡಿವೈಎಸ್ಪಿ ವಿ.ಎಸ್. ಹಾಲಮೂರ್ತಿ ರಾವ್ ಭೇಟಿ ನೀಡಿ, ಕಟ್ಟಡದ ನೀಲಿ ನಕ್ಷೆ ಪರಿಶೀಲಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನೂತನ ಠಾಣೆಯನ್ನು ಕಟ್ಟಲು ಅನುದಾನ ಬಿಡುಗಡೆಯಾಗಿದ್ದು, ಕಟ್ಟಡ ನಿರ್ಮಾಣಕ್ಕೂ ಮೊದಲು ಮೇಲಾಧಿಕಾರಿಗಳಿಂದ ಸ್ಥಳ ಪರಿಶೀಲನೆ ಮಾಡಲಾಗಿದೆ. ಠಾಣೆಯ ಹತ್ತಿರ ವಾಹನ ನಿಲುಗಡೆ ಹಾಗೂ ಸಾರ್ವಜನಿಕರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಸೂಕ್ತ ಸ್ಥಳಾವಕಾಶ ಕುರಿತು ಪರಿಶೀಲನೆಯಾಗಿದ್ದು, ಅದರ ಭಾಗವಾಗಿ ನಕ್ಷೆ ತಯಾರಿಸಲು ಮುಂದಾಗಿದ್ದಾರೆ ಎಂದರು.

ತಾಲ್ಲೂಕು ಪೊಲೀಸ್ ಠಾಣೆ ಮೇಲ್ದರ್ಜೆಗೆ ಅರ್ಹತೆ ಇದ್ದು, ಮುಂದಿನ ದಿನಗಳಲ್ಲಿ ಜನಸಂಖ್ಯೆಗೆ ಅನುಗುಣವಾಗಿ ಟ್ರಾಫಿಕ್ ಪೊಲೀಸ್ ಇನ್ಸ್‌ಪೆಕ್ಟರ್ ಹಾಗೂ ವೃತ್ತ ನಿರೀಕ್ಷಕರ ಕಟ್ಟಡಗಳು ಪ್ರತ್ಯೇಕವಾಗಿ ನಿರ್ಮಾಣವಾಗುವ ಸಾಧ್ಯತೆ ಇದೆ ಎಂದು ತಿಳಿಸಿದರು.

ಈ ವೇಳೆ ಸಿಪಿಐ ನಾಗರಾಜ್ ಎಂ. ಕಮ್ಮಾರ್, ಪಿಎಸ್ಐ ಸಿ.ಪ್ರಕಾಶ್, ಸಿಬ್ಬಂದಿಗಳಾದ ಜಾತಪ್ಪ, ಜಗದೀಶ್, ಪೊಲೀಸ್ ವಸತಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಗಮದ ಇಂಜಿನಿಯರ್ ಇನ್ನಿತರರಿದ್ದರು.

## ವೀರೇಶ್ ಹನಗವಾಡಿ ಅವರಿಂದ ಆಂಬ್ಯುಲೆನ್ಸ್ ಕೊಡುಗೆ



ಹರಿಹರ, ಜೂ. 3- ಹರಿಹರ ತಾಲ್ಲೂಕಿನ ರೋಗಿಗಳಿಗೆ ಅನುಕೂಲ ಕಲ್ಪಿಸುವ ದೃಷ್ಟಿಯಿಂದ ಜಿಲ್ಲಾ ಬಿಜೆಪಿ ಅಧ್ಯಕ್ಷ ಎಸ್.ಎಂ. ವೀರೇಶ್ ಹನಗವಾಡಿ ಅವರು ತಮ್ಮ ಹುಟ್ಟು ಹಬ್ಬದ ಅಂಗವಾಗಿ ತುರ್ತು ಆಂಬ್ಯುಲೆನ್ಸ್ ವಾಹನ ನೀಡಿದರು.

ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್, ಸಂಸದ ಜಿ.ಎಂ. ಸಿದ್ದೇಶ್ವರ್, ಶಾಸಕ ಎಸ್. ರಾಮಪ್ಪ, ಮಾಜಿ ಶಾಸಕ ಬಿ.ಪಿ. ಹರೀಶ್ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯಪ್ಪ, ಜಿಲ್ಲಾ ಆರೋಗ್ಯ ಅಧಿಕಾರಿ ಡಾ. ನಾಗರಾಜ್, ತಹಶೀಲ್ದಾರ್. ಕೆ. ಬಿ. ರಾಮಚಂದ್ರಪ್ಪ, ಪೌರಾಯುಕ್ತೆ ಎಸ್. ಲಕ್ಷ್ಮಿ, ತಾ.ಪಂ. ಇಓ ಗಂಗಾಧರನ್, ಡಾ. ಚಂದ್ರಮೋಹನ್, ಡಾ. ಹನುಮನಾಯ್ಕ್, ಸಿಪಿಐ ಸತೀಶ್ ಕುಮಾರ್, ನಗರಸಭೆ ಸದಸ್ಯರಾದ ಅಶ್ವಿನಿ ಕೃಷ್ಣ, ರಜನಿಕಾಂತ್, ವಿಜಯಕುಮಾರ್ ಸೇರಿದಂತೆ ಬಿಜೆಪಿ ಪಕ್ಷದ ಮುಖಂಡರು ಹಾಜರಿದ್ದರು.

## ಬೆಳವನೂರು : ಆಹಾರ ಕಿಟ್ ವಿತರಣೆ




ದಾವಣಗೆರೆ, ಜೂ.3- ತಾಲ್ಲೂಕಿನ ಬೆಳವನೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ಕೋವಿಡ್ ಟಾಸ್ಕ್‌ಫೋರ್ಸ್ ಸಿಬ್ಬಂದಿಗಳಿಗೆ ಆಹಾರದ ಕಿಟ್‌ಗಳನ್ನು ವಿತರಿಸಲಾಯಿತು. ಈ ಸಂದರ್ಭದಲ್ಲಿ ಗ್ರಾ.ಪಂ ಸದಸ್ಯರಾದ ಎ.ಪಿ. ನವೀನ್‌ಕುಮಾರ್, ತಿಪ್ಪೇಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.

## ಕೆವಿಕೆಯಿಂದ ಶೇಂಗಾ ತಳಿಗಳ ಪ್ರಾತ್ಯಕ್ಷಿಕೆ



ಹೊನ್ನಾಳಿ, ಜೂ.3 - ದಾವಣಗೆರೆಯ ಐಸಿಎಆರ್ ತರಳಬಾಳು ಕೃಷಿ ವಿಜ್ಞಾನ ಕೇಂದ್ರದಿಂದ ಶೇಂಗಾದಲ್ಲಿ ವಿವಿಧ ತಳಿಗಳ ತುಲನೆಯ ಕ್ಷೇತ್ರ ಪ್ರಯೋಗವನ್ನು ಹೊನ್ನಾಳಿ ತಾಲ್ಲೂಕಿನ ರಾಮೇಶ್ವರ ಗ್ರಾಮದಲ್ಲಿ ನಡೆಸಲಾಯಿತು. ಕೇಂದ್ರದ ಬೇಸಾಯ ತಜ್ಞ ಮಲ್ಲಿಕಾರ್ಜುನ್ ಮಾತನಾಡಿ, ಶೇಂಗಾದಲ್ಲಿ ನವೀನ ತಳಿಗಳಾದ G2-52 ಮತ್ತು GPBD-4 ಉತ್ತಮ ಇಳುವರಿ ಕೊಡುವ ಜೊತೆಗೆ ಉತ್ತಮ ಮೇವು ಹಾಗೂ ಎಲೆಚುಕ್ಕೆ ರೋಗ ನಿರೋಧಕ ಶಕ್ತಿಯನ್ನು ಹೊಂದಿರುತ್ತವೆ. ಬಿತ್ತನೆ ಸಮಯದಲ್ಲಿ ಶೇಂಗಾ ಬೀಜಗಳಿಗೆ ಬೀಜೋಪಚಾರ ಮಾಡಿ ಬಿತ್ತನೆ ಮಾಡುವುದು ಸೂಕ್ತ, ಅಣು ಜೀವಿಗಳಾದ ರೈಜೋಬಿಯಂ ಹಾಗೂ ರಂಜಕ ಕರಗಿಸುವ ಗೊಬ್ಬರ 500 ಗ್ರಾಂ ಪ್ರತಿ ಎಕರೆ ಬೀಜಕ್ಕೆ ಬೇಕಾಗುತ್ತದೆ. ಟ್ರೈಕೋಡರ್ಮಾ 4 ಗ್ರಾಂ ಪ್ರತಿ ಕೆಜಿ ಬೀಜಕ್ಕೆ ಬೀಜೋಪಚಾರ ಮಾಡುವುದರಿಂದ ಕತ್ತು ಕೊಳೆ ರೋಗವನ್ನು ತಡೆಯಬಹುದು ಎಂದರು.

## ಮರಾಠ ಸಮಾಜದ ಮುಖಂಡ ಅಜ್ಜಪ್ಪ ಪವಾರ್ ನಿಧನಕ್ಕೆ ಎಸ್ಸೆಸ್, ಎಸ್ಸೆಸ್ಸೆಂ ಶೋಕ



ದಾವಣಗೆರೆ, ಜೂ.3- ನಗರದ ಮರಾಠ ಸಮಾಜದ ಹಿರಿಯ ಮುಖಂಡರೂ, 17ನೇ ವಾರ್ಡಿನ ಕಾಂಗ್ರೆಸ್ ಅಧ್ಯಕ್ಷರೂ ಆದ ಅಜ್ಜಪ್ಪ ಪವಾರ್ ಅವರ ನಿಧನಕ್ಕೆ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ, ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರುಗಳು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ಅಜ್ಜಪ್ಪ ಪವಾರ್ ನಿಧನಕ್ಕೆ ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ, ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀಮತಿ ಅನಿತಾ ಬಾಯಿ ಮಾಲತೇಶ್ ರಾವ್ ಜಾಧವ್, ಪಾಲಿಕೆ ವಿರೋಧ ಪಕ್ಷದ ನಾಯಕ ಎ.ನಾಗರಾಜ್ ಅವರುಗಳು ಸಂತಾಪ ಸೂಚಿಸಿದ್ದಾರೆ.

## ಕ್ವೆಸ್ಟ್ ಶ್ರವಣ ಕೇಂದ್ರದಿಂದ ತಪಾಸಣೆ

ದಾವಣಗೆರೆ, ಜೂ. 3 - ಕ್ವೆಸ್ಟ್ ವಾಕ್ ಮತ್ತು ಶ್ರವಣ ಕೇಂದ್ರದಿಂದ ಕೋವಿಡ್ ಹಿನ್ನೆಲೆಯಲ್ಲಿ ರೋಗಿಗಳಿಗೆ ಶ್ರವಣ ಸಮಸ್ಯೆಗಳ ತಪಾಸಣೆ, ಇಯರ್ ಮೋಲ್ಡ್, ಇಯರ್ ಟಿಪ್ಸ್ ನೀಡುವ ಉದ್ದೇಶದಿಂದ ಶ್ರವಣ ದೋಷ ತಜ್ಞರು ತಪಾಸಣೆ ನಡೆಸಿ, ಸಮಸ್ಯೆಗಳನ್ನು ನಿವಾರಿಸಲಾಗುತ್ತದೆ ಎಂದು ಟಿ. ಸುಬ್ಬಾರಾಜು (9743780492) ತಿಳಿಸಿದ್ದಾರೆ.

## ಅಪರಿಚಿತ ಪುರುಷನ ಶವ ಪತ್ತೆ

ದಾವಣಗೆರೆ, ಜೂ.3- ಬ್ಯಾಲೇನಹಳ್ಳಿ ಮತ್ತು ಚಿಳ್ಳಕೆರೆ ರೈಲು ನಿಲ್ದಾಣಗಳ ಮಧ್ಯೆ ಅಪರಿಚಿತ ಪುರುಷನ ಶವ ನಿನ್ನೆ ಕಂಡುಬಂದಿದೆ. ಮೃತನಿಗೆ ಸುಮಾರು 55 ವರ್ಷ ವಯಸ್ಸಾಗಿರಬಹುದು.

ಕಪ್ಪು ಬಣ್ಣ, ಕೋಲು ಮುಖ ಹೊಂದಿದ್ದಾನೆ. ಮೃತ ವ್ಯಕ್ತಿಯು ಬಿಳಿ ಮತ್ತು ಕಪ್ಪು ಮಿಶ್ರಿತ ಉದ್ದಗೆರೆಗಳಿರುವ ತುಂಬು ತೋಳಿನ ಅಂಗಿ ತೊಟ್ಟಿದ್ದು, ನೀಲಿ ಬಣ್ಣದ ಪಂಚೆ ಧರಿಸಿದ್ದು, ಕೆಂಪು ಉಡುದಾರ ತೊಟ್ಟಿರುತ್ತಾನೆ. ಇವನ ಬಳಿ ಕೇಸರಿ ಬಣ್ಣದ ಟವೆಲ್ ಇದೆ.

ಸಂಬಂಧಪಟ್ಟವರು ದಾವಣಗೆರೆ ರೈಲ್ವೆ ಪೊಲೀಸ್ ಠಾಣೆ (ಮೊ. : 94808 00469, 94808 02123) ಯನ್ನು ಸಂಪರ್ಕಿಸಬಹುದು.

## ನೀತಿ ಆಯೋಗದ ಸೂಚ್ಯಂಕ: ರಾಜ್ಯಕ್ಕೆ 6ನೇ ಸ್ಥಾನ, ಬಿಹಾರಕ್ಕೆ ಕೊನೆಯ ಸ್ಥಾನ

ನವದೆಹಲಿ, ಜೂ.3 - ನೀತಿ ಆಯೋಗದ ಎಸ್.ಡಿ.ಜಿ. ಭಾರತ ಸೂಚ್ಯಂಕ 2020-21ರಲ್ಲಿ ಕೇರಳ ಮೊದಲ ಸ್ಥಾನದಲ್ಲಿದ್ದರೆ, ಬಿಹಾರ ಕೊನೆಯ ಸ್ಥಾನದಲ್ಲಿದೆ.

ಕರ್ನಾಟಕ ಸೂಚ್ಯಂಕದಲ್ಲಿ 72 ಅಂಕ ಪಡೆದುಕೊಂಡು ಆರನೇ ಸ್ಥಾನದಲ್ಲಿದೆ. 2019ರ ಸೂಚ್ಯಂಕದಲ್ಲಿ ರಾಜ್ಯ 66 ಅಂಕ ಪಡೆದುಕೊಂಡಿತ್ತು. ಸುಸ್ಥಿರ ಅಭಿವೃದ್ಧಿ ಗುರಿಗಳ ಸೂಚ್ಯಂಕವನ್ನು ನೀತಿ ಆಯೋಗ ಗುರುವಾರ ಬಿಡುಗಡೆ ಮಾಡಿದೆ. ಇದರಲ್ಲಿ ಸಾಮಾಜಿಕ, ಆರ್ಥಿಕ ಹಾಗೂ ಪರಿಸರ ಮಾನದಂಡಗಳಲ್ಲಿ ರಾಜ್ಯಗಳ ಸಾಧನೆಗಳನ್ನು ಗುರುತಿಸಲಾಗಿದೆ.

75 ಅಂಕಗಳೊಂದಿಗೆ ಕೇರಳ ಮೊದಲ ಸ್ಥಾನದ ಲ್ಲಿದೆ. ಹಿಮಾಚಲ ಪ್ರದೇಶ ಹಾಗೂ ತಮಿಳುನಾಡುಗಳು 74 ಅಂಕಗಳೊಂದಿಗೆ ಎರಡನೇ ಸ್ಥಾನದಲ್ಲಿವೆ.

ಬಿಹಾರ, ಜಾರ್ಖಂಡ್ ಹಾಗೂ ಅಸ್ಸಾಂಗಳು ಕೊನೆಯ ಮೂರು ಸ್ಥಾನಗಳಲ್ಲಿವೆ.

ನೀತಿ ಆಯೋಗದ ಉಪಾಧ್ಯಕ್ಷ ರಾಜೀವ್ ಕುಮಾರ್ ಅವರು ಗುರುವಾರ ಎಸ್.ಡಿ.ಜಿ. ಸೂಚ್ಯಂಕದ ಮೂರನೇ ಆವೃತ್ತಿಯನ್ನು ಬಿಡುಗಡೆ ಮಾಡಿದ್ದಾರೆ.

ಕೇಂದ್ರಾಡಳಿತ ಪ್ರದೇಶಗಳಲ್ಲಿ ಚಂಡೀಘಡ ಮೊದಲ ಸ್ಥಾನದಲ್ಲಿದೆ. ದೆಹಲಿ ನಂತರದ ಸ್ಥಾನ ದಲ್ಲಿದೆ. 2019ರ ಸೂಚ್ಯಂಕಕ್ಕೆ ಹೋಲಿಸಿದರೆ ಮಿಜೋ ರಾಮ್, ಹರಿಯಾಣ ಹಾಗೂ ಉತ್ತರಾಖಂಡಗಳು ಉತ್ತಮ ಜಿಗಿತ ಕಂಡಿವೆ. ಈ ರಾಜ್ಯಗಳು ಕ್ರಮವಾಗಿ 12, 10 ಹಾಗೂ 8 ಅಂಕಗಳನ್ನು ಗಳಿಸಿವೆ.

ಉತ್ತರಾಖಂಡ, ಗುಜರಾತ್, ಮಹಾ ರಾಷ್ಟ್ರ, ಮಿಜೋರಾಮ್, ಪಂಜಾಬ್, ಹರಿ ಯಾಣ, ತ್ರಿಪುರ, ದೆಹಲಿ, ಲಕ್ಷದ್ವೀಪ, ಅಂಡ ಮಾನ್ ಮತ್ತು ನಿಕೋಬಾರ್ ದ್ವೀಪ, ಜಮ್ಮು ಮತ್ತು ಕಾಶ್ಮೀರ ಹಾಗೂ ಲಡಾಖ್ ರಾಜ್ಯಗಳು 65ಕ್ಕೂ ಹೆಚ್ಚು ಅಂಕ ಗಳಿಸುವುದರೊಂದಿಗೆ ಮುಂಚೂಣಿ ರಾಜ್ಯಗಳಲ್ಲಿವೆ.

ದೇಶದ ಒಟ್ಟಾರೆ ಎಸ್.ಡಿ.ಜಿ. ಅಂಕ 6 ಅಂಕ ಹೆಚ್ಚಾಗಿ 66ಕ್ಕೆ ತಲುಪಿದೆ. ಶುದ್ಧ ನೀರು ಹಾಗೂ ನೈರ್ಮಲ್ಯ, ಶುದ್ಧ ಇಂಧನ ವಲಯಗಳಲ್ಲಿ ದೇಶ ಉತ್ತಮ ಸಾಧನೆ ಮಾಡಿದೆ. 2018ರಲ್ಲಿ ಮೊದಲ ಬಾರಿಗೆ ಎಸ್.ಡಿ.ಜಿ. ಸೂಚ್ಯಂಕ ರೂಪಿಸಲಾಗಿತ್ತು. ರಾಜ್ಯಗಳಲ್ಲಿ ಸ್ಪರ್ಧಾತ್ಮಕತೆ ತರುವ ಮೂಲಕ ಜಾಗತಿಕ ಗುರಿ ತಲುಪುವುದು ಈ ಸೂಚ್ಯಂಕದ ಉದ್ದೇಶವಾಗಿದೆ.

## ಅಪರೂಪದ ಪ್ರತಿಭೆ ಬಿ.ಜಿ.ನಾಗರಾಜ್ ಇನ್ನಿಲ್ಲ

(1ನೇ ಪುಟದಿಂದ) ಉಣಬಡಿಸುತ್ತಿದ್ದರು. ಈ ಹಿನ್ನೆಲೆಯಲ್ಲಿ ಯಾವುದೇ ಸಭೆ - ಸಮಾರಂಭಗಳಲ್ಲಿ ಅವರು ಭಾಗವಹಿಸುತ್ತಿದ್ದಾರೆ ಎಂಬ ವಿಚಾರ ತಿಳಿದೊಡನೆ ಆ ಸಭಾಂಗಣ ಕಿಕ್ಕಿರಿದು ತುಂಬಿರುತ್ತಿತ್ತು.

ಇದರಿಂದಾಗಿ 20 ವರ್ಷಗಳ ಹಿಂದೆ ಸುಮಾರು 3 ದಶಕಗಳ ಕಾಲ ಸ್ಥಳೀಯ ಮಾತ್ರ ವಲ್ಲದೇ ಮಧ್ಯ ಕರ್ನಾಟಕದ ಬಹುತೇಕ ಶಾಲಾ - ಕಾಲೇಜುಗಳು, ಸಾಂಸ್ಕೃತಿಕ ಸಂಘ - ಸಂಸ್ಥೆಗಳು ತಮ್ಮ ಕಾರ್ಯಕ್ರಮಗಳಿಗೆ ಬಿಜಿಎನ್ ಅವರನ್ನು ಆಹ್ವಾನಿಸಲು ಮುಗಿ ಬೀಳುತ್ತಿದ್ದವು. ಕೆಲವು ಸಂದರ್ಭಗಳಲ್ಲಿ ಅವರನ್ನು ಅನುಮತಿ ಪಡೆಯದೇ ಆಹ್ವಾನ ಪತ್ರಿಕೆಗಳಲ್ಲಿ ಬಿಜಿಎನ್ ಹೆಸರು ಮುದ್ರಿತವಾಗಿರುವ ಪ್ರಸಂಗಗಳು ನಡೆದಿವೆ.

ಬಿಜಿಎನ್ ಅವರು ಕೇವಲ ಒಂದು ಕಾಲೇಜಿನ ಅಧ್ಯಾಪಕರಾಗಿರಲಿಲ್ಲ. ಶಿಕ್ಷಣದೊಂದಿಗೆ, ಸಾಹಿತ್ಯ - ಸಾಂಸ್ಕೃತಿಕ ಕ್ಷೇತ್ರಗಳಲ್ಲೂ ಛಾಪು ಮೂಡಿಸಿದ್ದರು. ಎಸ್.ಹಾಲಪ್ಪ ಮೇಷ್ಟ್ರು ಮತ್ತು ಇತರರೊಂದಿಗೆ ಬಿಜಿಎನ್ ಹುಟ್ಟು ಹಾಕಿ ಬೆಳೆಸಿದ 'ಪ್ರತಿಮಾ ಸಭಾ' ಸಾಹಿತ್ಯ - ಸಾಂಸ್ಕೃತಿಕವಾಗಿ ಹೆಮ್ಮರವಾಗಿ ಬೆಳೆದು ಸ್ಫೂರ್ತಿಯ ಸೆಲೆಯಾಗಿತ್ತು.

ಮುಂದಿನ ದಿನಗಳಲ್ಲಿ ಡಾ. ಎಂ.ಜಿ. ಈಶ್ವರಪ್ಪ, ಪಿ.ಜಿ.ರಂಗನಾಥ್, ಡಾ. ಶಾಮಲಾಂಕ, ಎ.ಎನ್. ಪ್ರಸನ್ನ, ಜಿ.ಎನ್.ಸತ್ಯಮೂರ್ತಿ, ಬಿ.ವಿ. ವೀರಭದ್ರಪ್ಪ, ಪ್ರೊ. ಎಸ್.ಹೆಚ್.ಪಟೇಲ್ ಸೇರಿದಂತೆ ಸಭಾದ ಮೂಲಕ ಸಾಹಿತ್ಯ, ಸಂಗೀತ, ನಾಟಕ, ವಿಚಾರ ಸಂಕಿರಣ... ಹೀಗೆ ಹತ್ತು ಹಲವು ಕಾರ್ಯಕ್ರಮಗಳು ನಿರಂತರವಾಗಿ ನಡೆದುಕೊಂಡು ಬಂದವು. ಮುಂದೆ, ಬಾ.ಮ. ಬಸವರಾಜಯ್ಯ, ಎಂ.ಎಸ್.ಶಿವಶರಣಪ್ಪ, ರಿದಂ ಪ್ರಕಾಶ್, ಅಶ್ವಿನಿ ಸೋಮು, ನಾಗರಾಜ್ ಗೊಡಬನಾಳ್, ಡಾ. ಕೆ.ಹೆಚ್.ಪಂಚಾಕ್ಷರಪ್ಪ, ಬಿ.ಎನ್. ಮಲ್ಲೇಶ್ ಅಂತಹ ನೂರಾರು ಪ್ರತಿಭಾವಂತರ ದಂಡೇ ಸಾಹಿತ್ಯ - ಸಾಂಸ್ಕೃತಿಕ ಸ್ವರೂಪ ಪಡೆದುಕೊಂಡಿದ್ದರು.



ಬಿಜಿಎನ್ ಸ್ಥಾಪಿಸಿದ 'ಪ್ರತಿಮಾ ಸಭಾ' ಉದ್ಘಾಟನಾ ಸಮಾರಂಭದ ಸ್ಮರಣೀಯ ಚಿತ್ರ.

**ಶ್ರದ್ಧಾಂಜಲಿ :** ಬಿಜಿಎನ್ ನಿಧನಕ್ಕೆ 'ಜನತಾವಾಣಿ' ಸಂಪಾದಕ ಎಂ.ಎಸ್.ವಿಕಾಸ್ ಅವರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ಶಿಕ್ಷಣ ಮತ್ತು ಸಾಹಿತ್ಯ ಕ್ಷೇತ್ರಗಳಲ್ಲಿ ನಾಗರಾಜ್ ಅವರು ಸಲ್ಲಿಸಿದ ಸೇವೆಯನ್ನು ಮೆಲುಕು ಹಾಕಿರುವ ವಿಕಾಸ್, ಜನತಾವಾಣಿ ಪತ್ರಿಕೆಗೂ ಬಿ.ಜಿ.ನಾಗರಾಜ್ ಅವರಿಗೂ ಅವಿನಾಭಾವ ಸಂಬಂಧ. ಪತ್ರಿಕೆ ಆರಂಭವಾದ ದಿನಗಳಲ್ಲಿ ಸಂಪಾದಕರಾಗಿದ್ದ ಹೆಚ್.ಎನ್. ಷಡಾಕ್ಷರಪ್ಪ ಅವರೊಡನೆ ರಾತ್ರಿ ಯೆಲ್ಲಾ ಕೂತು ಕರೆಕ್ಷನ್ ಹಾಕಿದ ದಿನಗಳನ್ನು ಸ್ಮರಿಸಿದ್ದಾರೆ.

**ಪ್ರತಿಮಾ ಸಭಾ ಕಂಬನಿ :** ಬಿ.ಜಿ.ನಾಗರಾಜ್ ನಿಧನಕ್ಕೆ ಪ್ರತಿಮಾ ಸಭಾ ಅಧ್ಯಕ್ಷ ಡಾ. ಎಂ.ಜಿ. ಈಶ್ವರಪ್ಪ, ಕಾರ್ಯದರ್ಶಿ ಬಾ.ಮ. ಬಸವರಾಜಯ್ಯ, ಖಜಾಂಚಿ ಬಿ.ಎನ್. ಮಲ್ಲೇಶ್, ಆರ್.ಟಿ.ಅರುಣ್ ಕುಮಾರ್, ನಾಗಲಿಂಗರಾಜ್, ಶೈಲಜಾ, ಬಿ.ಟಿ.ಜಾಹ್ನವಿ, ಎಸ್.ಎಸ್.ಸಿದ್ದರಾಜು ಸೇರಿದಂತೆ ಸಭಾ ಬಳಗ ದುಃಖತಪ್ತವಾಗಿದೆ.

**ಸಂತಾಪ :** ಪ್ರೊ. ಬಿ.ಜಿ.ನಾಗರಾಜ್ ನಿಧನಕ್ಕೆ ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ, ಬಿಜೆಪಿ ಮುಖಂಡ ಜಯಪ್ರಕಾಶ್ ಕೊಂಡಜ್ಜಿ, ಹಿರಿಯ ಲೇಖಕ ಹಳೇಬಿಡು ರಾಮ ಪ್ರಸಾದ್ ಮತ್ತಿತರರು ಸಂಪಾಸ ವ್ಯಕ್ತಪಡಿಸಿದ್ದಾರೆ.

## ಹರಿಹರ : ಆರ್ಭಟದಿಂದ ಬಂದ ಮುಂಗಾರು ಮಳೆ



ಹರಿಹರ, ಜೂ.3- ನಗರದಲ್ಲಿ ಮುಂಗಾರು ಮಳೆ ಇಂದು ಬೆಳಿಗ್ಗೆ ಮತ್ತು ರಾತ್ರಿ ಸಮಯದಲ್ಲಿ ಗುಡುಗು ಮಿಂಚಿನ ಆರ್ಭಟ ಮಾಡುತ್ತ ಜೋರಾಗಿ ಬಂದಿದೆ.

ನಗರದಲ್ಲಿ ಬೆಳಿಗ್ಗೆ 7 ಗಂಟೆಗೆ ಪ್ರಾರಂಭವಾಗಿ 9.30 ರವರೆಗೆ ಬಂದು ಸಾರ್ವಜನಿಕರಿಗೆ ಲಾಕ್‌ಡೌನ್ ಇರೋದಕ್ಕೆ ಇವತ್ತು ಅಗತ್ಯ ವಸ್ತುಗಳ ಖರೀದಿಸಲು ಸರ್ಕಾರ 12 ಗಂಟೆಯವರೆಗೆ ಅವಕಾಶ ನೀಡಿದ್ದರೂ ಸಹ ಸಾರ್ವಜನಿಕರು ಮಳೆಗೆ ಹೆದರಿಕೊಂಡು ಮನೆಯಿಂದ ಹೊರಗೆ ಬರಲಿಲ್ಲ. ಕಾರಣ ಕೊರೊನಾ ರೋಗವು ಸ್ವಲ್ಪ ನೆಗಡಿ, ಜ್ವರ, ತಲೆನೋವು ಬಂದರೆ ಕೊರೊನಾ ಟೆಸ್ಟ್ ಮಾಡಿಸಿ ಎಂದು ವೈದ್ಯರು ಹೇಳುತ್ತಾರೆ ಎಂದು ಸಾರ್ವಜನಿಕರು ಮಳೆ ಆಗುತ್ತಿರುವ ಸಮಯದಲ್ಲಿ ಯಾರೂ ಹೊರಗಡೆ ಬರುವುದಕ್ಕೆ ಮನಸ್ಸು ಮಾಡದೇ ಇರುವುದು ಕಂಡುಬಂದಿದೆ. ಇದರಿಂದಾಗಿ ಮಾರುಕಟ್ಟೆಯಲ್ಲಿ ಅಷ್ಟೊಂದು ಜನರು ಕಂಡುಬರಲಿಲ್ಲ.

ಮತ್ತೆ ಸಂಜೆ 7 ಗಂಟೆಗೆ ಪ್ರಾರಂಭವಾದ ಮಳೆ ಗುಡುಗು, ಮಿಂಚಿನ ಆರ್ಭಟ ಮಾಡುತ್ತಾ, ತಡ ರಾತ್ರಿಯವರೆಗೆ ಜೋರಾಗಿ ಬಂದಿತು. ಜೋರಾಗಿ ಬಿದ್ದ ಮಳೆಯಿಂದಾಗಿ ಮನೆ, ಜಮೀನು ಹಾನಿಯ ಬಗ್ಗೆ ಯಾವುದೇ ಮಾಹಿತಿ ದೊರೆತಿರುವು ದಿಲ್ಲ. ಮುಂಗಾರು ಮಳೆ ಚೆನ್ನಾಗಿ ಬೀಳುತ್ತಿದಂತೆ ರೈತರ ಮುಖದಲ್ಲಿ ಮಂದಹಾಸ ಮೂಡಿ ಬಿತ್ತನೆ ಕಾರ್ಯದಲ್ಲಿ ತೊಡಗಿಸಲು ಸಿದ್ಧತೆ ಮಾಡಲು ಮುಂದಾಗಿದ್ದಾರೆ.

## ಖಾಸಗಿ ಶಾಲಾ ಆಡಳಿತ ಮಂಡಳಿಗಳಿಂದ ಸೋಂಕಿತ ಶಿಕ್ಷಕರಿಗೆ ಸೌಲಭ್ಯ

ದಾವಣಗೆರೆ, ಜೂ.3- ಎಲ್ಲಾ ಖಾಸಗಿ ಶಾಲೆಗಳ ಶಿಕ್ಷಕ ಮತ್ತು ಶಿಕ್ಷಕೇತರ ಸಿಬ್ಬಂದಿಗಳಿಗೆ, ಕೊರೊನಾದಿಂದ ಬಳಲುತ್ತಿದ್ದವರಿಗೆ ಖಾಸಗಿ ಶಾಲಾ ಆಡಳಿತ ಮಂಡಳಿಗಳ ಒಕ್ಕೂಟ ಆಸ್ಪತ್ರೆಗಳ ಬಗ್ಗೆ ಮಾಹಿತಿ ಹಾಗೂ ಇನ್ನಿತರೆ ಎಲ್ಲಾ ವ್ಯವಸ್ಥೆ ಕೂಡ ಕಲ್ಪಿಸಿಕೊಡಲಾಗುವುದು.

ಕೊರೊನಾ ಸೋಂಕಿನಿಂದ ಆಸ್ಪತ್ರೆಯಲ್ಲಿ ಹಾಗೂ ಹೋಮ್ ಐಸೋಲೇಷನ್ ಇದ್ದರೆ ಅವರಿಗೆ ಉಚಿತ ಊಟದ ವ್ಯವಸ್ಥೆ ಹಾಗೂ ಆಂಬ್ಯುಲೆನ್ಸ್ ವ್ಯವಸ್ಥೆ, ಇನ್ನಿತರೆ ಎಲ್ಲಾ ರೀತಿಯ ಸಹಾಯವನ್ನು ನೀಡಲಾಗುತ್ತದೆ.

ಸಂಕೋಚವಿಲ್ಲದೆ ದಾವಣಗೆರೆ ಜಿಲ್ಲಾ ಖಾಸಗಿ ಶಾಲಾ ಆಡಳಿತ ಮಂಡಳಿಗಳ ಒಕ್ಕೂಟಕ್ಕೆ ವಿಚಾರಿಸಿ. ಸಂಪರ್ಕಿಸಬೇಕಾದ ಮೊಬೈಲ್ ಸಂಖ್ಯೆ ಜಯಣ್ಣ - 9449320601, ಆರ್.ಎಲ್ ಪ್ರಭಾಕರ್ - 9448045683, ವಾರಿಯರ್ಸ್‌ಗಳಾದ ಉಮಾಪತಯ್ಯ - 9448244555, ಲಿಂಗರಾಜು - 9740593927, ಶ್ರೀರಾಮಮೂರ್ತಿ -9886751267, ಮೊಯಿನುದ್ದೀನ್ - 9741746889, ಪ್ರಸನ್ನಕುಮಾರ - 9448467021, ಪ್ರಭುದೇವ್ - 7760499155, ಲೋಕೇಶ್ ಜಗಳೂರು - 8431373942, ಸುರೇಶ್ ಹೊನ್ನಾಳಿ - 9945753485 ಹಾಗೂ ಪ್ರಸನ್ನಕುಮಾರ್ ಸಂತೇಬೆನ್ನೂರು - 9845177373 ಅವರನ್ನು ಸಂಪರ್ಕಿಸುವಂತೆ ಒಕ್ಕೂಟದ ಅಧ್ಯಕ್ಷ ಉಮಾಪತಯ್ಯ ತಿಳಿಸಿದ್ದಾರೆ.

## ತರಳಬಾಳು ಕೃಷಿ ವಿಜ್ಞಾನ ಕೇಂದ್ರದಲ್ಲಿ ವಿಶ್ವ ಹಾಲು ದಿನಾಚರಣೆ

ದಾವಣಗೆರೆ, ಜೂ. 3- ನಗರದ ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ವತಿಯಿಂದ ವಿಶ್ವ ಹಾಲು ದಿನವನ್ನು ಮಂಗಳವಾರ ವರ್ಚ್ಯುವಲ್ ಕಾರ್ಯಕ್ರಮ ಮೂಲಕ ಆಚರಿಸಲಾಯಿತು.

ಕೇಂದ್ರದ ಮುಖ್ಯಸ್ಥ ಡಾ. ದೇವರಾಜ ಟಿ.ಎನ್. ಮಾತನಾಡಿ, ವಿಶ್ವದಲ್ಲಿ 2001 ರಿಂದಲೂ ಪ್ರತಿ ವರ್ಷ ಜೂನ್ 1 ರಂದು 'ವಿಶ್ವ ಹಾಲು ದಿನಾಚರಣೆ' ಆಚರಿಸಲಾಗುತ್ತಿದ್ದು, ವಿಶ್ವದಲ್ಲಿ 100 ಕೋಟಿಗೂ ಅಧಿಕ ಜನ ಹೈನುಗಾರಿಕೆಯಲ್ಲಿ ಉದ್ಯೋಗ ಸೃಷ್ಟಿಸಿಕೊಂಡಿದ್ದಾರೆ. ಹಾಲಿನ ಇಳುವರಿ ಹೆಚ್ಚು ಮಾಡುವ ಕಡೆ ರೈತರು ಗಮನಹರಿಸಬೇಕೆಂದರು.

ಶುದ್ಧ ಮತ್ತು ಗುಣಮಟ್ಟದ ಹಾಲು ಉತ್ಪಾದನೆ ಬಗ್ಗೆ ಮಾತನಾಡಿದ ಪಶುವಿಜ್ಞಾನಿ ಡಾ. ಜಯದೇವಪ್ಪ ಜಿ.ಕೆ. ಅವರು ಹಾಲಿನ ಉತ್ಪಾದನೆಯಲ್ಲಿ ಭಾರತ ಮೊದಲನೇ ಸ್ಥಾನದಲ್ಲಿದ್ದು ಇಳುವರಿಯಲ್ಲಿ ಹಿಂದಿದ್ದೇವೆ, ರಾಸುಗಳ ಸಮತೋಲನ ಆಹಾರ ಕ್ರಮಗಳನ್ನು ಅಳವಡಿಸಿಕೊಳ್ಳುವುದು ಮುಖ್ಯ ಎಂದು ತಿಳಿಸಿದರು.

## ಕೊರೊನಾ : ಮಕ್ಕಳ ರಕ್ಷಣೆಗಾಗಿ ಕೇಂದ್ರದಿಂದ ಮಾರ್ಗಸೂಚಿ

ನವದೆಹಲಿ, ಜೂ. 3 - ಕೊರೊನಾದಿಂದ ಪೋಷಕರನ್ನು ಕಳೆದುಕೊಂಡ ಮಕ್ಕಳ ರಕ್ಷಣೆ ಹಾಗೂ ಕಾಳಜಿಗಾಗಿ ಕೇಂದ್ರ ಸರ್ಕಾರ ಮಾರ್ಗಸೂಚಿ ಪ್ರಕಟಿಸಿದೆ. ರಾಜ್ಯಗಳು, ಜಿಲ್ಲಾಡಳಿತ, ಪೊಲೀಸ್, ಪಂಚಾಯತ್ ರಾಜ್ ಸಂಸ್ಥೆಗಳು ಹಾಗೂ ನಗರ ಸ್ಥಳೀಯ ಸಂಸ್ಥೆಗಳಿಗೆ ಹೊಣೆ ಹಂಚಲಾಗಿದೆ.

ಈ ಬಗ್ಗೆ ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳಿಗೆ ಪತ್ರ ಬರೆದಿರುವ ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯದ ಕಾರ್ಯದರ್ಶಿ ರಾಮ್ ಮೋಹನ್ ಮಿಶ್ರ, ಕೊರೊನಾ ಸಂದರ್ಭದಲ್ಲಿ ಮಕ್ಕಳ ಹಿತ ಕಾಯುವುದು ಪ್ರಾಥಮಿಕ ಹೊಣೆಯಾಗಿದೆ ಎಂದಿದ್ದಾರೆ.

ಕೊರೊನಾ ಕಾರಣದಿಂದ 9,346 ಮಕ್ಕಳು ತಂದೆ ಇಲ್ಲವೇ ತಾಯಿ, 1,700 ಮಕ್ಕಳು ತಂದೆ - ತಾಯಿ ಇಬ್ಬರನ್ನೂ ಕಳೆದುಕೊಂಡಿದ್ದಾರೆ ಎಂದು ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಸುಪ್ರೀಂ ಕೋರ್ಟ್‌ಗೆ ವಿವರ ನೀಡಿದೆ. ಇಂತಹ ಮಕ್ಕಳನ್ನು ರಾಜ್ಯಗಳು ಗುರುತಿಸಬೇಕು. ಪ್ರತಿಯೊಂದು ಮಗುವಿನ ಮಾಹಿತಿ ರೂಪಿಸಿ, ಮಗುವಿನ ಪ್ರತ್ಯೇಕ ಅಗತ್ಯಗಳನ್ನು ತಿಳಿದು ಟ್ರ್ಯಾಕ್ ಚೈಲ್ಡ್ ವೆಬ್ ತಾಣಕ್ಕೆ ದಾಖಲಿಸಬೇಕು ಎಂದು ತಿಳಿಸಲಾಗಿದೆ.

ಹಾಲಿ ಇರುವ ಮಕ್ಕಳ ಕಾಳಜಿ ಕೇಂದ್ರಗಳಲ್ಲಿ ತಾತ್ಕಾಲಿಕವಾಗಿ ನೆಲೆ ಕಲ್ಪಿಸಬೇಕು. ಮಕ್ಕಳ ರಕ್ಷಣಾ ಸೇವೆ ಯೋಜನೆಯಡಿ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಬೇಕು ಎಂದು ಕೇಂದ್ರ ಸರ್ಕಾರ ಹೇಳಿದೆ.

ಜಿಲ್ಲಾಧಿಕಾರಿಗಳು ಇಂತಹ ಮಕ್ಕಳ ಪೋಷಕರಾಗಿದ್ದಾರೆ. ಬಾಲ ನ್ಯಾಯ ಕಾಯ್ದೆಯ ಅನ್ವಯ ಜಿಲ್ಲಾಧಿಕಾರಿಗಳು ಮಕ್ಕಳ ರಕ್ಷಣೆಗೆ ಕ್ರಮ ತೆಗೆದುಕೊಳ್ಳಬೇಕು ಎಂದು ತಿಳಿಸಲಾಗಿದೆ.

ಸ್ಥಳೀಯ ಸಂಸ್ಥೆಗಳು ಮಕ್ಕಳ ರಕ್ಷಣಾ ಸಮಿತಿಗಳನ್ನು ರಚಿಸಬೇಕು. ಇಂತಹ ಮಕ್ಕಳ ಕುರಿತು ಜಿಲ್ಲಾಡಳಿತ ಇಲ್ಲವೇ ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳಿಗೆ ಮಾಹಿತಿ ನೀಡಬೇಕು ಎಂದು ತಿಳಿಸಲಾಗಿದೆ.

## ವಯಸ್ಸಿನ ಮಿತಿ ತೆಗೆದುಹಾಕಿ ಯುವಕರನ್ನು ಬೆಳೆಸಲು ಕರೆ

### ಶ್ರೀ ಸಂಚಾರಿ ಕೆಬಿಆರ್ ಡ್ರಾಮಾ ಕಂಪನಿ ಮನವಿ



ದಾವಣಗೆರೆ, ಜೂ.3- ಕೋವಿಡ್ ಸಂಕಷ್ಟದ ವೇಳೆ ಸರ್ಕಾರ ಕಲಾವಿದರಿಗೆ ವಿಶೇಷ ಪ್ಯಾಕೇಜ್ ಘೋಷಣೆ ಮಾಡಿದ್ದು, 35 ವರ್ಷ ಮೇಲ್ಪಟ್ಟ ಕಲಾವಿದರಿಗೆ ಮಾತ್ರ ಎಂದು ಹೇಳಿರುವುದು ಎಷ್ಟರ ಮಟ್ಟಿಗೆ ಸರಿ? ಎಂದು ದಾವಣಗೆರೆಯ ಶ್ರೀ ಸಂಚಾರಿ ಕೆಬಿಆರ್ ಡ್ರಾಮಾ ಕಂಪನಿ ಪ್ರಶ್ನಿಸಿದೆ.

ಪ್ರಸ್ತುತ ವೃತ್ತಿ ರಂಗಭೂಮಿಯಲ್ಲಿ 20 ರಿಂದ 35 ವರ್ಷದ ಒಳಗಿನ ಯುವ ಕಲಾವಿದರುಗಳು ಆಧಾರಸ್ಥಂಭಗಳಾಗಿದ್ದಾರೆ. ಯುವ ಕಲಾವಿದರಿಂದಲೇ ಇಂದು ವೃತ್ತಿ ರಂಗಭೂಮಿ ಪ್ರಗತಿಯಲ್ಲಿದೆ. ಹವ್ಯಾಸಿ ರಂಗಭೂಮಿಯಲ್ಲಿಯೂ ಯುವ ಕಲಾವಿದರೇ ಹೆಚ್ಚಾಗಿರುವುದರಿಂದ ದಯಮಾಡಿ 35 ವರ್ಷ ನಿಗದಿ ಮಾಡಿರುವುದನ್ನು ತೆಗೆದು ಹಾಕಿ ಎಲ್ಲರಿಗೂ ಕೂಡ ಸಹಾಯ ಧನ ತಲುಪುವಂತೆ ಮಾಡಬೇಕೆಂದು ಸರ್ಕಾರವನ್ನು ವಿನಂತಿಸಿದೆ.

ಮತ್ತು ಜೂನ್ 5 ಎಂಬ ಗಡುವನ್ನು ತೆಗೆದು ಹಾಕಬೇಕು. ಕಾರಣ 7ನೇ ತಾರೀಖಿನವರೆಗೆ ಲಾಕ್‌ಡೌನ್ ಇರುತ್ತದೆ. ಈಗ ಯಾವ ಊರಿನಲ್ಲಿಯೂ ಕೂಡ ಸೇವಾ ಸಿಂಧೂ ಅಂಗಡಿಗಳು ಇರುವುದಿಲ್ಲ. ಎಲ್ಲಾ ಗಣಕೀಕೃತ ಅಂಗಡಿಗಳು ಕೂಡ ಮುಚ್ಚಿರುತ್ತವೆ. ಇನ್ನೂ ಕೆಲವು ದಿನಗಳ ಕಾಲ ಅರ್ಜಿ ಸಲ್ಲಿಸಲು ಅವಕಾಶ ಮಾಡಿಕೊಡಬೇಕೆಂದು ಸರ್ಕಾರಕ್ಕೆ ವಿನಂತಿಸುತ್ತೇವೆ ಎಂದು ಕಂಪನಿ ಮಾಲೀಕರಾದ ಚಿಂದೋಡಿ ಶಂಭುಲಿಂಗಪ್ಪ ತಿಳಿಸಿದ್ದಾರೆ.

### ಬಿದರಕೆರೆ ಗ್ರಾಮದ ನಿವಾಸಿ ಶ್ರೀಮತಿ ಡಿ. ರತ್ನಮ್ಮ ನಿಧನ



ಜಗಳೂರು ತಾಲ್ಲೂಕಿನ ಬಿದರಕೆರೆ ಗ್ರಾಮದ ನಿವಾಸಿಯಾದ ದಿ|| ಶ್ರೀ ಡಿ. ನಾಗಪ್ಪನವರ ಧರ್ಮಪತ್ನಿ **ಶ್ರೀಮತಿ ರತ್ನಮ್ಮ** (90) ಅವರು ದಿನಾಂಕ 03.06.2021ರ ಗುರುವಾರ ಮಧ್ಯಾಹ್ನ 12.25 ಕ್ಕೆ ದೈವಾಧೀನರಾಗಿರುತ್ತಾರೆ. ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 03.06.2021ರ ಸಂಜೆ 5.30ಕ್ಕೆ ಬಿದರಕೆರೆಯಲ್ಲಿ ನೆರವೇರಿಸಲಾಯಿತು.

ಇಂತಿ ದುಃಖತಪ್ತರು
ಶ್ರೀಮತಿ, ಶ್ರೀ ದೇವಿಕೆರೆ ರುದ್ರಮುನಿ ಮತ್ತು ಸಹೋದರರು, ಸೊಸೆಯಂದಿರು, ಮೊಮ್ಮಕ್ಕಳು, ದೇವಿಕೆರೆ ವಂಶಸ್ಥರು, ಬಂಧು-ಮಿತ್ರರು, ದೇವಿಕೆರೆ.

### ಕೈಲಾಸ ಸಮಾರಾಧನೆ ಆಹ್ವಾನ



ದಾವಣಗೆರೆ ಸಿಟಿ ಶಾಮನೂರು ವಾಸಿ ವಾದ್ಯ ಕಲಾವಿದರಾದ **ಶ್ರೀ ಬಸವರಾಜಪ್ಪ ಮತ್ತು ಮಕ್ಕಳು** ಮಾಡುವ ವಿಜ್ಞಾಪನೆಗಳು. ಆತ್ಮೀಯರೇ, ದಿನಾಂಕ 22.5.2021ರ ಶನಿವಾರ ರಾತ್ರಿ ನನ್ನ ಧರ್ಮಪತ್ನಿ **ಶ್ರೀಮತಿ ನಾಗಮ್ಮ** ಅವರು ನಿಧನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ **ಕೈಲಾಸ ಸಮಾರಾಧನೆಯನ್ನು ದಿನಾಂಕ 4.6.2021ನೇ ಶುಕ್ರವಾರ ಬೆಳಿಗ್ಗೆ 10.30ಕ್ಕೆ ಶಾಮನೂರಿನ ಮೃತರ ಸ್ವಗಹದಲ್ಲಿ** ನೆರವೇರಿಸಲಾಗುವುದು. ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : **ಬಸವರಾಜಪ್ಪ ಮತ್ತು ಮಕ್ಕಳು, ಶಾಮನೂರು.**

## ಕೇರಳ ತಲುಪಿದ ಮುಂಗಾರು

ನವದಹೆಲಿ, ಜೂ. 3 - ಮುಂಗಾರು ಮಾರುತುಗಳು ಗುರುವಾರ ಕೇರಳ ತಲುಪಿವೆ. ಈ ಬಾರಿ ಎರಡು ದಿನಗಳ ವಿಳಂಬದ ನಂತರ ಮುಂಗಾರಿನ ಆಗಮನವಾಗಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಇದರೊಂದಿಗೆ ದೇಶದ ನಾಲ್ಕು ತಿಂಗಳ ಮುಂಗಾರು ದಿನಗಳು ಆರಂಭವಾದಂತಾಗಿದೆ. ಸಾಮಾನ್ಯವಾಗಿ ಮುಂಗಾರು ಜೂನ್ 1ರಂದು ಕೇರಳಕ್ಕೆ ತಲುಪುತ್ತದೆ.

### ಬೆಣ್ಣೆಹಳ್ಳಿ ಬಸವರಾಜಪ್ಪ ನಿಧನ



ದಾವಣಗೆರೆ ಮಹಾರಾಜಪೇಟೆ ವಿಠಲ ಮಂದಿರದ ಹತ್ತಿರದ ವಾಸಿ ಬೆಣ್ಣೆಹಳ್ಳಿ ಬಸವರಾಜಪ್ಪ (66) ಇವರು ದಿನಾಂಕ 3.06.2021ರ ಗುರುವಾರ ಮಧ್ಯಾಹ್ನ 3 ಗಂಟೆಗೆ ನಿಧನರಾದರು. ಪತ್ನಿ, ಮೂವರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 4.06.2021ರ ಶುಕ್ರವಾರ ಬೆಳಿಗ್ಗೆ 10 ಗಂಟೆಗೆ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

### ಗದುಗಿನ ಮಠದ ವಿನಯ್‌ಕುಮಾರ್ ನಿಧನ



ದಾವಣಗೆರೆ ಎಂಸಿಸಿ 'ಎ' ಬ್ಲಾಕ್ ಸಾಯಿಬಾಬಾ ಮಂದಿರದ ಹತ್ತಿರದ ವಾಸಿ ಗದುಗಿನ ಮಠದ ರುದ್ರಸ್ವಾಮಿಯವರ ಪುತ್ರ ಜಿ.ಎಂ. ವಿನಯ್‌ಕುಮಾರ್ (54) ಇವರು ದಿನಾಂಕ 3.06.2021ರ ಗುರುವಾರ ಬೆಳಗ್ಗೆ 7ಗಂಟೆಗೆ ನಿಧನರಾದರು. ತಂದೆ, ತಾಯಿ, ಪತ್ನಿ, ಓರ್ವ ಪುತ್ರಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 3.06.2021ರ ಗುರುವಾರ ಸಂಜೆ 4 ಗಂಟೆಗೆ ಶಾಮನೂರು ವೀರಶೈವ ರುದ್ರಭೂಮಿಯಲ್ಲಿ ನೆರವೇರಿತು.

### ಶಕುಂತಲ ಜಿ. ಸಾಯಗಾವಿ ನಿಧನ



ದಾವಣಗೆರೆ ಸ್ವಾಮಿ ವಿವೇಕಾನಂದ ಬಡಾವಣೆ 5ನೇ ಕ್ರಾಸ್ ವಾಸಿ ಜಿ.ವಿ. ಸಾಯಗಾವಿ ಇವರ ಧರ್ಮಪತ್ನಿ ಶಕುಂತಲ ಜಿ. ಸಾಯಗಾವಿ (80) ಇವರು, ದಿನಾಂಕ 03.06.2021ರ ಗುರುವಾರ ರಾತ್ರಿ 9.30ಕ್ಕೆ ನಿಧನರಾದರು. ಇಬ್ಬರು ಪುತ್ರರು, ಮೂವರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು, ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 04.06.2021ರ ಶುಕ್ರವಾರ ಮಧ್ಯಾಹ್ನ 2 ಗಂಟೆಗೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಲಿದೆ.

### 18ನೇ ಪುಣ್ಯತಿಥಿ



**ನೇತ್ರದಾನಿ ಶ್ರೀಮತಿ ಟಿ.ಆರ್. ಕೋಮಲಾಬಾಯಿ**

ಸದಾ ನಿಮ್ಮ ನೆನಪಿನಲ್ಲಿ

**ಮಕ್ಕಳು, ಸೊಸೆ, ಅಳಿಯ, ಮೊಮ್ಮಕ್ಕಳು, ಮರಿಮೊಮ್ಮಕ್ಕಳು, ಖುಷಿ, ಶಿಖಾ, ನಾಭ್ಯ ಬಂಧು-ಮಿತ್ರರು, ಹಿತೈಷಿಗಳು.**

### ಪುಣ್ಯಸ್ಮರಣೆ



**ಕೆ.ಜಿ. ಮಹೇಶ್ವರಪ್ಪ**

**ರಾಜ್ಯ ಸಭಾ ಮಾಜಿ ಸದಸ್ಯರು**

*ನೀವು ನಮ್ಮನ್ನು ಅಗಲಿ ಇಂದಿಗೆ ಒಂಭತ್ತು ವರ್ಷಗಳಾದವು. ಸದಾ ನಿಮ್ಮಸ್ಮರಣೆಯಲ್ಲಿರುವ,*

ಮಗಳು : ಉಷಾ ಪರಮೇಶ್, ಅಳಿಯ : ಎ.ಜಿ. ಪರಮೇಶ್ವರಪ್ಪ
ಮೊಮ್ಮಕ್ಕಳು, ಮರಿ ಮೊಮ್ಮಕ್ಕಳು :
ಡಾ|| ಶ್ರೀಮತಿ ದೀಪಾ ಪಾಟೀಲ್, ಡಾ|| ಆನಂದ್ ಪಾಟೀಲ್, ಚಿ|| ಅನಿಷ್, ಚಿ|| ದಕ್ಷ, ಬಿಜಾಪುರ.
ಶ್ರೀಮತಿ ರೂಪಾ ಕಿರಣ್, ಶ್ರೀ ಎಂ.ಆರ್. ಕಿರಣ್, ಚಿ|| ಪ್ರಣವ್, ಕು|| ಆನ್ಯಾ, U.S.A.
**ಕುರ್ಕಿ ಗೌಡ್ರ, ವೇದಮೂರ್ತಿ ಹಾಗೂ ಕುಟುಂಬ ವರ್ಗದವರು.**

## ಕೋವಿಡ್ ಕೇರ್ ಸೆಂಟರ್‌ನಲ್ಲಿ ಸಂಗೀತ ಕಾರ್ಯಕ್ರಮ



ದಾವಣಗೆರೆ, ಜೂ.3- ನಗರದ ಹೊರ ವಲಯದ ಜೆ.ಹೆಚ್. ಪಟೇಲ್ ಬಡಾವಣೆಯ ಕೋವಿಡ್ ಕೇರ್ ಸೆಂಟರ್‌ನಲ್ಲಿ ಕೊರೊನಾ ಸೋಂಕಿತರಿಗೆ ಆತ್ಮಸ್ಥೈರ್ಯ ತುಂಬಲು ಜಿ.ಪಂ. ಸದಸ್ಯ ಕೆ.ಎಸ್. ಬಸವಂತಪ್ಪ ನೇತೃತ್ವದಲ್ಲಿ ರಸಮಂಜರಿ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ನಗರದ ಪ್ರೇಮ್ ವಾದ್ಯ ವೃಂದದವರು ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು. ಗಾಯಕರಾಗಿ ಬಸವಂತಪ್ಪ ರಂಜಿಸಿದರು. ಈ ಸಂದರ್ಭದಲ್ಲಿ ಕೋವಿಡ್ ಸೆಂಟರ್‌ನ ಆರೋಗ್ಯಾಧಿಕಾರಿ ಮಂಜುನಾಥ್, ಕಾಂಗ್ರೆಸ್ ಜಿಲ್ಲಾ ಸಾಮಾಜಿಕ ಜಾಲತಾಣದ ಅಧ್ಯಕ್ಷ ಹಾಲೇಕಲ್ ಗೋವಿಂದ್, ಸುರೇಶ್ ಮತ್ತಿತರರಿದ್ದರು.

## ನಿವೃತ್ತಿ : ಖಾಸಗಿ ಉದ್ಯೋಗ ಗಂಭೀರ ದುರ್ವರ್ತನೆ

ನವದೆಹಲಿ, ಜೂ. 3 – ನಿವೃತ್ತಿಯ ನಂತರ ಕಡ್ಡಾಯವಾಗಿರುವ ಬಿಡುವಿನ ಅವಧಿ ಪೂರ್ಣಗೊಳಿಸದೇ ಖಾಸಗಿ ಉದ್ಯೋಗಕ್ಕೆ ಸೇರುವುದು ಗಂಭೀರ ದುರ್ವರ್ತನೆ ಎಂದು ಕೇಂದ್ರ ವಿಚಕ್ಷಣ ಆಯೋಗ ಹೇಳಿದೆ. ಎಲ್ಲಾ ಸರ್ಕಾರಿ ಸಂಸ್ಥೆಗಳ ನೌಕರರು, ನಿವೃತ್ತಿಯ ನಂತರ ಖಾಸಗಿ ಉದ್ಯೋಗ ಸೇರುವಾಗ ವಿಚಕ್ಷಣ ಆಯೋಗದ ಒಪ್ಪಿಗೆ ಪಡೆಯುವುದು ಕಡ್ಡಾಯ ಎಂದು ಆದೇಶದಲ್ಲಿ ತಿಳಿಸಲಾಗಿದೆ.

# ಕೋವಿಡ್ ನಿಯಂತ್ರಿಸಲು ಪಕ್ಷಾತೀತ ಕೆಲಸ ನಿರ್ವಹಿಸಬೇಕು

### ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಕರೆ

ದಾವಣಗೆರೆ, ಜೂ.3- ಎಲ್ಲರೂ ಪಕ್ಷ ಭೇದ ಮರೆತು ಒಟ್ಟಾಗಿ ಸೇರಿ ಮಹಾಮಾರಿ ಕೊರೊನಾ ನಿಯಂತ್ರಿಸುವಲ್ಲಿ ಮುಂದಾಗಬೇಕೆಂದು ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಯುವ ಜನತೆಗೆ ಕರೆ ನೀಡಿದರು.

ತರಳಬಾಳು ಸೇವಾ ಸಮಿತಿ ಹಾಗೂ ಶಿವಸೈನ್ಯ ಯುವಕರು ನಗರದ ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಕಲ್ಯಾಣ ಮಂಟಪದಲ್ಲಿ ಕೊರೊನಾ ಸೋಂಕಿತರು, ಕೊರೊನಾ ವಾರಿಯರ್‌ಗಳಿಗೆ ಸಲ್ಲಿಸುತ್ತಿರುವ ದಾಸೋಹ ಸೇವೆಯ ಸಿದ್ಧತೆ ಪರಿಶೀಲಿಸಿದ ನಂತರ ಅವರು ಮಾತನಾಡಿದರು.

ಕೊರೊನಾ ನಿಯಂತ್ರಣ ಕಾರ್ಯದಲ್ಲಿ ಯಾವುದೇ ರಾಜಕಾರಣ ಮಾಡದೇ ನಿಸ್ವಾರ್ಥ ಸೇವೆ ಅಗತ್ಯ. ಇಂತಹ ಪುಣ್ಯದ ಕೆಲಸದಲ್ಲಿ ತೊಡಗಿರುವ ಶಿವಸೈನ್ಯ ಕಾರ್ಯಕರ್ತರು ಪ್ರಶಂಸಾರ್ಹರು. ಇಂತಹ ಸೇವಾ ಕಾರ್ಯಕ್ಕೆ ತಮ್ಮ ಸಂಪೂರ್ಣ ಸಹಕಾರವಿದೆ ಎಂದು ಹೇಳಿದರು.

ಕೋವಿಡ್ ನಿಯಂತ್ರಣಕ್ಕೆ ಬರುವ ವರೆಗೆ ದಾಸೋಹ ಸೇವೆ ನಿರಂತರವಾಗಿ ನಡೆಯಲಿ. ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳ ಮಾರ್ಗದರ್ಶನದಲ್ಲಿ ಶಿವಸೈನ್ಯ ಪಡೆ ನಡೆಸುತ್ತಿರುವ ದಾಸೋಹ ಸೇವಾ ಕಾರ್ಯ ಶ್ಲಾಘನೀಯ ಎಂದು ಹೇಳಿದರು.



ಕೊರೊನಾ ಸೋಂಕಿತರ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿದ್ದು, ಯಾವ ಆಸ್ಪತ್ರೆಯಲ್ಲೂ ಬೆಡ್‌ಗಳು ಸಿಗದೆ ರೋಗಿಗಳು ಪರದಾಡುವಂತಾಗಿದೆ. ಸಾವುಗಳು ಸಹ ಹೆಚ್ಚಾಗುತ್ತಿವೆ. ಆದರೆ ಮಾಧ್ಯಮಗಳಲ್ಲಿ ವಾಸ್ತವ ಮಾಹಿತಿ ನೀಡುತ್ತಿಲ್ಲ ಎಂದು ತಿಳಿಸಿದರು.

ದಾವಣಗೆರೆ ಹೊರ ವಲಯದ ಸುಸಜ್ಜಿತ ಹಾಸ್ಟೆಲ್ ನಿರ್ಮಾಣ ಕಾರ್ಯದಲ್ಲಿ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಅವರ ಕೊಡುಗೆ ಪ್ರಮುಖವಾದುದು. 5 ಕೋಟಿ ರೂ.ಗಳು ಕಾಂಗ್ರೆಸ್ ವತಿಯಿಂದ ತಮ್ಮ ತಂದೆಯು ಒಂದೂವರೆ ಕೋಟಿ ರೂ.ಗಳನ್ನು ವೈಯಕ್ತಿಕ ದೇಣಿಗೆ ನೀಡಿರುವುದನ್ನು ಸ್ಮರಿಸಿದರು.

**ಕಡ್ಡಾಯವಾಗಿ ಲಸಿಕೆ ಹಾಕಿಸಿಕೊಳ್ಳಿ :** 18 ವರ್ಷ ಮೇಲ್ಪಟ್ಟ ಎಲ್ಲರೂ ಸಹ ಲಸಿಕೆ ಪಡೆದುಕೊಳ್ಳುವಂತೆ ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಮನವಿ ಮಾಡಿದರು.

ಲಸಿಕೆ ಪಡೆದರೆ ಸಾವಿನ ದವಡೆಯಿಂದ ಪಾರಾಗಬಹುದು. ಆಕ್ಸಿಜನ್, ವೆಂಟಿಲೇಟರ್ ಮಟ್ಟಕ್ಕೆ ಹೋಗುವುದನ್ನು ತಪ್ಪಿಸುತ್ತದೆ ಎಂದರು.

**ತರಳಬಾಳು ಸಂಸ್ಥೆಯಿಂದ ಕೋವಿಡ್ ಕೇರ್ ಸೆಂಟರ್ :** ತರಳಬಾಳು ವಿದ್ಯಾಸಂಸ್ಥೆಯ ಹಾಸ್ಟೆಲ್‌ಗಳು ಕೋವಿಡ್ ಕೇರ್ ಸೆಂಟರ್ ಆಗಿ ಪರಿವರ್ತನೆ ಮಾಡಿ ಕೊರೊನಾ ಸೋಂಕಿತರ ರಕ್ಷಣೆಗೆ ನಿಂತಿರುವ ತರಳಬಾಳು ಶ್ರೀಗಳ ಕಾರ್ಯ ಸ್ತುತ್ಯಾರ್ಹ ಎಂದು ಹೇಳಿದರು.

ಕಸಾಪ ತಾಲ್ಲೂಕು ಅಧ್ಯಕ್ಷ ಬಿ. ವಾಮದೇವಪ್ಪ ಅವರು ಮಾತನಾಡಿ, ಶಾಮನೂರು ಮಲ್ಲಿಕಾರ್ಜುನ್ ಸಚಿವರಾಗಿದ್ದ ಅವಧಿಯಲ್ಲಿನ ಸಾಧನೆ ಹಾಗೂ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಅವರ ಸೇವಾ ಕಾರ್ಯಗಳನ್ನು ಮುಕ್ತ ಕಂಠದಿಂದ ಪ್ರಶಂಸಿಸಿದರು.

ಕಾಂಗ್ರೆಸ್ ಮುಖಂಡರಾದ ಹನುಮನಹಳ್ಳಿ ನಾಗೇಂದ್ರಪ್ಪ, ಎಪಿಎಂಸಿ ಮಾಜಿ ಅಧ್ಯಕ್ಷ ಮುದೇಗೌಡ್ರು ಗಿರೀಶ್, ಕಾಂಗ್ರೆಸ್ ಯುವ ಮುಖಂಡರಾದ ಮಾಗಾನಹಳ್ಳಿ ಬಿ.ಕೆ. ಪರಶುರಾಂ, ಬೇತೂರು ಕರಿಬಸಪ್ಪ, ಶಿವಸೈನ್ಯ ಪದಾಧಿಕಾರಿಗಳಾದ ಹೆಮ್ಮನಬೇತೂರು ಶಶಿಧರ್, ಮೆಳ್ಳೆಕಟ್ಟೆ ಶ್ರೀನಿವಾಸ್, ಪ್ರಭು ಕಾವಲಹಳ್ಳಿ, ಮಾಗನೂರು ಉಮೇಶ್ ಗೌಡ್ರು, ಲಿಂಗರಾಜ್ ಅಗಸನಕಟ್ಟೆ, ಧನ್ಯಕುಮಾರ್ ಎಲೇಬೇತೂರು, ಸತೀಶ್ ಸಿರಿಗೆರೆ, ಶಿವಕುಮಾರ್ ಕೊರಟಿಕೆರೆ, ಮತ್ತಿತರರಿದ್ದರು.

ಇದೇ ವೇಳೆ ಶಾಮನೂರು ಮಲ್ಲಿಕಾರ್ಜುನ್ ಅವರನ್ನು ಶಶಿಧರ್ ಹೆಮ್ಮನಬೇತೂರು ಅಭಿನಂದಿಸಿದರು.

# ಕೆಎಸ್‌ಆರ್‌ಟಿಸಿ ಟ್ರೇಡ್‌ಮಾರ್ಕ್ : ಸೌಹಾರ್ದಕ್ಕೆ ಕರೆ



ಬೆಂಗಳೂರು, ಜೂ. 3 - ಕೇರಳವು ಕೆಎಸ್‌ಆರ್‌ಟಿಸಿ ಎಂಬ ಶಬ್ದವನ್ನು ತಾವೇ ಮೊದಲು ಬಳಸಿದ್ದರಿಂದ ಕರ್ನಾಟಕವು ಈ ಶಬ್ದವನ್ನು ಬಳಸಬಾರದು ಎಂದು ತಕರಾರು ತೆಗೆದ ಬಗ್ಗೆ ಈಗ ಟ್ರೇಡ್‌ಮಾರ್ಕ್ ರಿಜಿಸ್ಟ್ರಿಯು ತೀರ್ಪು ನೀಡಿದೆ ಎಂದು ಸಾರಿಗೆ ಇಲಾಖೆ ಹೊಣೆ ಹೊತ್ತಿರುವ ಉಪಮುಖ್ಯಮಂತ್ರಿ ಲಕ್ಷ್ಮಣ್ ಸವದಿ ಇಂದಿಲ್ಲಿ ತಿಳಿಸಿದ್ದಾರೆ.

ಈ ಬಗ್ಗೆ ಪತ್ರಿಕಾ ಹೇಳಿಕೆ ನೀಡಿರುವ ಅವರು, ಈ ತೀರ್ಪಿನಲ್ಲಿ ಏನಿದೆ ಎಂಬ ಅಂಶವು ನಮಗೆ ಅಧಿಕೃತವಾಗಿ ಇನ್ನೂ ಬಂದಿಲ್ಲ, ಅದು ಲಭ್ಯವಾದ ನಂತರ ಕರ್ನಾಟಕ ರಾಜ್ಯದ ಮುಂದಿನ ನಿಲುವು ಮತ್ತು ಕಾನೂನು ಹೋರಾಟ ಏನು ಎಂಬುದರ ಬಗ್ಗೆ ತೀರ್ಮಾನಿಸಲಾಗುವುದು ಎಂದಿದ್ದಾರೆ.

ಒಂದು ರಾಜ್ಯವು ಮತ್ತೊಂದು ರಾಜ್ಯದ ಜೊತೆಗೆ ಯಾವುದೇ ಸಂಘರ್ಷವಿಲ್ಲದೆ ಸೌಹಾರ್ದಯುತವಾಗಿ ಸಂಬಂಧವನ್ನು ಇಟ್ಟುಕೊಂಡು ಹೋಗಬೇಕೆಂದು ಈ ಒಕ್ಕೂಟ ವ್ಯವಸ್ಥೆ ಹೇಳುತ್ತದೆ.

ಆದರೆ ದುರದೃಷ್ಟವಶಾತ್ ಈ ವಿವಾದ ಅನಗತ್ಯವಾಗಿ ಎದ್ದಿದೆ. ಏಕೆಂದರೆ ಖಾಸಗಿ ಸಂಸ್ಥೆಗಳಲ್ಲಾದರೆ ಈ ರೀತಿಯ ಹೆಸರು ಅಥವಾ ಟ್ರೇಡ್ ಮಾರ್ಕ್‌ಗಳಿಂದ ಅವರ ವ್ಯವಹಾರ, ಲಾಭಗಳ ಮೇಲೆ ಪ್ರಭಾವ ಬೀಳುತ್ತದೆ.

ಆದರೆ ಸರ್ಕಾರಿ ಸಂಸ್ಥೆಗಳು ಹಾಗಲ್ಲ. ಇಲ್ಲಿ ಜನರ ಸೇವೆಯೇ ಮುಖ್ಯ. ಕರ್ನಾಟಕವಾಗಲೀ, ಕೇರಳವಾಗಲೀ ಪರಸ್ಪರ ಸಾರಿಗೆ ಕ್ಷೇತ್ರದಲ್ಲಿ ಲಾಭಗಳಿಸುವ ಮೇಲಾಟಕ್ಕೆ ಅಥವಾ ಸ್ಪರ್ಧೆಗೆ ಮುಂದಾಗದೆ ಸಾರ್ವಜನಿಕರ ಹಿತಾಸಕ್ತಿ ಮತ್ತು ಸೇವೆಯನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡುತ್ತಿವೆ ಎಂದವರು ಹೇಳಿದ್ದಾರೆ.

ಹೀಗಾಗಿ ಈ ವಿಷಯವನ್ನು ಯಾವುದೇ ರಾಜ್ಯಗಳು ಪ್ರತಿಷ್ಠೆಯ ವಿಷಯವನ್ನಾಗಿ ಮಾಡಿಕೊಳ್ಳಬಾರದು. ಇದು ಕೇರಳಕ್ಕೇನು ಸಂಭ್ರಮ ಪಡುವಂತಹ ವಿಚಾರವೇನಲ್ಲ. ಕರ್ನಾಟಕದಲ್ಲಿ ಕೆಎಸ್‌ಆರ್‌ಟಿಸಿ ಎಂಬ ಹೆಸರಿದ್ದರೆ ಅದರಿಂದ ಕೇರಳ ರಾಜ್ಯದ ಕೆಎಸ್‌ಆರ್‌ಟಿಸಿ ಸಂಸ್ಥೆಗೆ ಯಾವುದೇ ನಷ್ಟವೇನಿಲ್ಲ. ಕರ್ನಾಟಕವು ಕೇರಳದ ಸಾರಿಗೆ ಸಂಸ್ಥೆಗಳೊಂದಿಗೆ ಯಾವತ್ತೂ ಪೈಪೋಟಿಗೆ ಇಳಿದಿದ್ದಿಲ್ಲ ಎಂಬುದನ್ನು ಕೇರಳ ಮೊದಲು ಅರ್ಥಮಾಡಿಕೊಳ್ಳಬೇಕು ಎಂದವರು ಹೇಳಿದ್ದಾರೆ. ದೇಶದ ಹಿತದೃಷ್ಟಿಯಿಂದ ರಾಜ್ಯ ರಾಜ್ಯಗಳ ನಡುವಿನ ಬಾಂಧವ್ಯವನ್ನು ಉತ್ತಮವಾಗಿ ಇಟ್ಟುಕೊಳ್ಳುವುದು ಬಹಳ ಮುಖ್ಯವಾದ ವಿಷಯ ಎಂದವರು ತಿಳಿಸಿದ್ದಾರೆ.

## ಕನಿಷ್ಠ ಕೂಲಿಗೆ ಸಮಿತಿ

ನವದೆಹಲಿ, ಜೂ. 3 - ಕನಿಷ್ಠ ಕೂಲಿ ನಿಗದಿಗೆ ಶಿಫಾರಸ್ಸು ಮಾಡಲು ಕೇಂದ್ರ ಸರ್ಕಾರ ಪ್ರೊ. ಅಜಿತ್ ಮಿಶ್ರ ಅವರ ನೇತೃತ್ವದ ಪರಿಣಿತರ ಸಮಿತಿ ರೂಪಿಸಿದೆ. ಈ ಬಗ್ಗೆ ಕೇಂದ್ರ ಕಾರ್ಮಿಕ ಹಾಗೂ ಉದ್ಯೋಗ ಸಚಿವಾಲಯ ಆದೇಶ ಹೊರಡಿಸಿದೆ. ಬೇರೆ ಬೇರೆ ಉದ್ಯೋಗಿಗಳಿಗೆ ನಿಗದಿಪಡಿಸಬೇಕಾದ ಕನಿಷ್ಠ ಕೂಲಿ ಹಾಗೂ ಎಲ್ಲಾ ಉದ್ಯೋಗಿಗಳಿಗೆ ಇರಬೇಕಾದ ಕನಿಷ್ಠ ಕೂಲಿಯ ಬಗ್ಗೆ ಸಮಿತಿ ವರದಿ ಸಲ್ಲಿಸಲಿದೆ.

## ಮೊದಲನೇ ವರ್ಷದ ಪುಣ್ಯಸ್ಮರಣೆ



**ದಿ|| ಶ್ರೀಮತಿ ದುಗ್ಗಮ್ಮನವರು**

ಮಾಲೀಕರು, ಒಣ ಮೆಣಸಿನಕಾಯಿ, ವ್ಯಾಪಾರಿಗಳು,

ಮರಣ : 15.06.2020

*ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು. ನಿಮ್ಮ ನೆನಪು, ನಿಮ್ಮ ಶ್ರೇಷ್ಠ ಸಂಸ್ಕಾರ, ಶಿಸ್ತು, ಆದರ್ಶ, ನಮ್ಮೆಲ್ಲರ ಪಾಲಿಗೆ ದಾರಿ ದೀಪವಾಗಿದೆ.*

ಪತಿ, ಮಕ್ಕಳು, ತಮ್ಮಂದಿರು, ಅಳಿಯಂದಿರು ಮತ್ತು ಮೊಮ್ಮಕ್ಕಳು

ದುಗ್ಗಮ್ಮ ಟ್ರೇಡರ್ಸ್, ಚಾಮರಾಜಪೇಟೆ

ಸಂಜಯ್ ಎಂಟರ್‌ಪ್ರೈಸಸ್,

ಕೆ.ಟಿ.ಜೆ ನಗರ 14ನೇ ಕ್ರಾಸ್, 2ನೇ ಮೇನ್ ದಾವಣಗೆರೆ. ಮೊ : 99640 68538, 95357 60078, 97405 29968

## ಶ್ರೀ ಸೂರ್ಯಕಾಂತ ತಾಳಿಕೋಟಿ ನಿಧನ



ದಾವಣಗೆರೆ ಎಸ್.ಎಸ್. ಲೇ ಔಟ್ ವಾಸಿ, ಹೆಸರಾಂತ ಜವಳಿ ವರ್ತಕರಾದ **ಶ್ರೀ ಸೂರ್ಯಕಾಂತ ತಾಳಿಕೋಟಿ** ಅವರು ದಿನಾಂಕ 03.06.2021ರ ಗುರುವಾರ ಸಂಜೆ 6.30 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 72 ವರ್ಷ ವಯಸ್ಸಾಗಿತ್ತು. ಧರ್ಮಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.

ದುಃಖತಪ್ತ ಕುಟುಂಬ ವರ್ಗ, ತಾಳಿಕೋಟಿ ವಂಶಸ್ಥರು

ಮೊ. : 98441 20202, 98868 61110

## ಅಮೆರಿಕದಿಂದ ಭಾರತಕ್ಕೆ ಲಸಿಕೆ

ನವದೆಹಲಿ, ಜೂ. 3 – ಜಾಗತಿಕವಾಗಿ ಲಸಿಕೆ ಹಂಚಿಕೊಳ್ಳುವ ಭಾಗವಾಗಿ ಭಾರತಕ್ಕೂ ಲಸಿಕೆ ರವಾನಿಸುವುದಾಗಿ ಅಮೆರಿಕ ತಿಳಿಸಿದೆ. ಈ ಬಗ್ಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಅಮೆರಿಕದ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಅವರ ಜೊತೆ ಮಾತನಾಡಿದ್ದು, ಅಮೆರಿಕದ ಕ್ರಮಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಈ ಬಗ್ಗೆ ಸರಣಿ ಟ್ವೀಟ್ ಮಾಡಿರುವ ಪ್ರಧಾನಿ ಮೋದಿ ಅಮೆರಿಕ ಸರ್ಕಾರ, ಉದ್ಯಮಿಗಳು ಹಾಗೂ ಅನಿವಾಸಿ ಭಾರತೀಯರು ನೀಡಿರುವ ಬೆಂಬಲಕ್ಕಾಗಿ ಧನ್ಯವಾದ ಸಲ್ಲಿಸಿದ್ದಾರೆ.

ಅಮೆರಿಕದ ರಾಯಭಾರಿ ಕಚೇರಿ ಈ ಬಗ್ಗೆ ಹೇಳಿಕೆ ನೀಡಿದ್ದು, ಈ ತಿಂಗಳ ಅಂತ್ಯದಲ್ಲಿ ಭಾರತಕ್ಕೆ ಲಸಿಕೆ ತಲುಪಲಿದೆ ಎಂದು ಹೇಳಿದೆ.


ಜೂನ್ ಅಂತ್ಯದಲ್ಲಿ 8 ಕೋಟಿ ಲಸಿಕೆಗಳನ್ನು ಹಲವಾರು ದೇಶಗಳಿಗೆ ರವಾನಿಸಲಾಗುವುದು ಎಂದು ಅಮೆರಿಕದ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಹೇಳಿದ್ದಾರೆ.

## ಹರಿಹರ ತಾ.ನಲ್ಲಿ 87 ಜನರಿಗೆ ಪಾಸಿಟಿವ್

ಮಲೇಬೆನ್ನೂರು, ಜೂ.3 - ಇಲ್ಲಿನ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಗುರುವಾರ 15 ಜನರಿಗೆ ಕೋವಿಡ್ ಟೆಸ್ಟ್ ಮಾಡಿದ್ದು, 6 ಜನರಿಗೆ ಪಾಸಿಟಿವ್ ಬಂದಿದೆ. ಇವತ್ತು 60 ಜನರಿಗೆ ಲಸಿಕೆ ಹಾಕಲಾಗಿದ್ದು, ಶುಕ್ರವಾರ 45 ವರ್ಷ ಮೇಲ್ಪಟ್ಟವರಿಗೆ ಮೊದಲ ಡೋಸ್ ಕೋವಿಶೀಲ್ಡ್ ಲಸಿಕೆ ನೀಡಲಾಗುವುದೆಂದು ಡಾ.ಲಕ್ಷ್ಮಿದೇವಿ ತಿಳಿಸಿದ್ದಾರೆ.

**87 ಕೇಸ್:** ಹರಿಹರ ತಾಲ್ಲೂಕಿನಲ್ಲಿ ಗುರುವಾರ ಬೆಳಗಿನ ವರದಿ ಪ್ರಕಾರ 87 ಜನರಿಗೆ ಸೋಂಕು ದೃಢಪಟ್ಟಿದೆ.

**ಖರೀದಿಗೆ ಜನಜಾತ್ರೆ:** ಪಟ್ಟಣದಲ್ಲಿ ಗುರುವಾರ ಬೆಳಿಗ್ಗೆ 6 ರಿಂದ 12 ರವರೆಗೆ ಎಲ್ಲಾ ಅಂಗಡಿ ಮುಗ್ಗಟ್ಟುಗಳು ಓಪನ್ ಇದ್ದ ಕಾರಣ ಜನರು ಅಗತ್ಯ ವಸ್ತುಗಳ ಖರೀದಿಗಾಗಿ ಸಾಮಾಜಿಕ ಅಂತರ ಕಾಯ್ದುಕೊಳ್ಳದೆ ಮುಗಿ ಬಿದ್ದಿದ್ದರು.




## ಪ್ರಥಮ ವರ್ಷದ ಪುಣ್ಯಸ್ಮರಣೆ



**ಶ್ರೀ ಬಿ. ಓಬಯ್ಯ**

ವಾಣಿಜ್ಯ ತೆರಿಗೆ ಇಲಾಖೆ ನಿವೃತ್ತ ಇನ್ಸ್‌ಪೆಕ್ಟರ್

18ನೇ ಕ್ರಾಸ್, ಆಂಜನೇಯ ಬಡಾವಣೆ,

ದಾವಣಗೆರೆ.

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು. ನಿಮ್ಮ ನೆನಪು, ನಿಮ್ಮ ಶ್ರೇಷ್ಠ ಸಂಸ್ಕಾರ, ಶಿಸ್ತು, ಆದರ್ಶ ನಮ್ಮೆಲ್ಲರ ಪಾಲಿಗೆ ದಾರಿ ದೀಪವಾಗಿದೆ. ಭಗವಂತನ್ನು ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲಿ

ಸದಾ ನಿಮ್ಮ ಸ್ಮರಣೆಯಲ್ಲಿರುವ...

ಧರ್ಮ ಪತ್ನಿ : ಶ್ರೀಮತಿ ಜಯ್ಯಮ್ಮ

ಗಂಡು ಮಕ್ಕಳು ಮತ್ತು ಸೊಸೆಯಂದಿರು : ಶ್ರೀಮತಿ ಶಾಂತಾ ಬಿ. ಮಂಜುನಾಥ್ ಶ್ರೀಮತಿ ಪಂಕಜಾ ಬಿ. ವಿಶ್ವನಾಥ್, ಶ್ರೀಮತಿ ಕವಿತಾ ಬಿ. ಶ್ರೀನಿವಾಸ್

ಹೆಣ್ಣು ಮಕ್ಕಳು ಮತ್ತು ಅಳಿಯಂದಿರು : ಶ್ರೀಮತಿ ಶೋಭಾ ಶ್ರೀ ಗುರುಸ್ವಾಮಿ ಶ್ರೀಮತಿ ತ್ರಿವೇಣಿ, ಶ್ರೀ ಮಾರುತಿ ನಾಯ್ಕ್, ಶ್ರೀಮತಿ ಪುಷ್ಪಲತಾ ಶ್ರೀ ರಾಜೇಂದ್ರಕುಮಾರ್

ಮೊಮ್ಮಕ್ಕಳು : ನಂದನ್, ವಿನಾಯಕ, ಪ್ರತೀಕ್, ಹರ್ಷ, ಯುಕ್ತಾ, ಸ್ವಾತಿ, ಸಾಗರ್ ಮೋನಿಷ್, ರೋಹನ್ ಹಾಗೂ ಬಂಧು-ಮಿತ್ರರು, ದಾವಣಗೆರೆ.




JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte